# ಅಧ್ಯಾಯ ಆರು

# ಮೈಸೂರು ಜಿಲ್ಲೆಯ ವೀರಶೈವ ಮಠಗಳು :ಸಾಹಿತ್ಯಿಕ ಕೊಡುಗೆಗಳು

# ಅಧ್ಯಾಯ : ೬

# ಮೈಸೂರು ಜಿಲ್ಲೆಯ ವೀರಶೈವ ಮಠಗಳ ಸಾಹಿತ್ಯಕ ಕೊಡುಗೆ

ಮಾನವನ ಜೀವನಕ್ಕೂ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿದೆ ಸಾಹಿತ್ಯವಿಲ್ಲದೆ ಬದುಕಿಲ್ಲ ಸಾಹಿತ್ಯ, ಸಂಸ್ಕೃತಿ, ಒಂದು ನಾಣ್ಯದ ಎರಡು ಮುಖಳಿದ್ದಂತೆ ಸಾಹಿತ್ಯದ ಸ್ವರೂಪ ಚನ್ನಾಗಿದ್ದರೆ ಸಂಸ್ಕೃತಿಯ ಅರಿವು ತಿಳಿಯುತ್ತಿದೆ. ಸತ್ವಪೂರ್ಣವಾದ ಸಾಹಿತ್ಯ ರಚನೆಯದಲ್ಲಿ ಸಮಾಜದ ನಾಗರಿಕತೆಯ ವಿಧವಿಧಾನಗಳನ್ನು ಅರಿಯಬಹುದು.

ವೀರಶೈವ ಮಠಗಳಿಗೂ ಸಾಹಿತ್ಯಕ್ಕೂ ಅವಿನಾಬಾವ ಸಂಬಂಧವಿದೆ ಕ್ರಿ.ಶ.೧೧ ನೇ ಶತಮಾನದ ಆರಂಭದಿಂದಲೂ ವೀರಶೈವ ಸಂಬಂದ ಸಾಹಿತ್ಯ ಬೆಳೆದುಬಂದಿದೆ. ಶೈವ ಪಂಥದಿಂದ ಆರಂಭವಾದ ಸಾಹಿತ್ಯ ಸೇವೆ ವೀರಶೈವ ಸಾಹಿತ್ಯವಾಗಿ ಇಂದು ವಿಪುಲವಾಗಿ ಬೆಳೆದಿದೆ. ಈ ವೀರಶೈವ ಸಮಾಜವು ತನ್ನದೆ ಆದಂತಹ' ನೀತಿ ನಿಯಮಗಳ ಮೂಲಕ ಹಳ್ಳಿಯಿಂದ ಪಟ್ಟಣ ಪ್ರದೇಶದವರೆಗೂ, ಇಂದು ಪ್ರಸಿದ್ದ ವೀರಶೈವ ಮಠಗಳ ಸಾವಿರಾರು ಶಾಖೆಗಳಿವೆ. ಈ ಶಾಖೆಗಳು ಇಡೀ ಸಮಾಜದ ಏಳಿಗೆಗೆ ಧರ್ಮ, ಸಂಸ್ಕೃತಿ ಉಳಿಸಿ ಬೆಳೆಸುವುದರ ಜೊತೆಗೆ ಜ್ಞಾನಾನ್ನವನ್ನು ಆರಂಭಿಸಿ, ಎಲ್ಲ ಧರ್ಮದ ಗ್ರಂಥಗಳನ್ನೂ ಸಂಗ್ರಹಿಸಿ ಪ್ರಕಟಿಸುವ ಮಹತ್ತರವಾದ ಕಾರ್ಯ ನಿರ್ವಹಿಸುತ್ತಿದೆ. ಇಷ್ಟಲ್ಲದೆ ಮಠಗಳಲ್ಲಿ ಧಾರ್ಮಿಕ ಗೋಷ್ಠಿಗಳನ್ನು ಏರ್ಪಡಿಸುವುದು ಹಿರಿಯರ ಗ್ರಂಥಗಳ ಮೇಲಿನ ಚರ್ಚೆ ಟೀಕೆ ಟಿಪ್ಪಣಿಗಳನ್ನೂ ಏರ್ಪಡಿಸುವುದು, ನವ ಬರಹಗಾರರಿಗೆ ಉತ್ತೇಜನ ಕೊಡುವುದು ನಡೆದಿದೆ ಎಷ್ಟೋ ಮೂಲರೂಪದಲ್ಲಿದ ಕೃತಿಗಳು ಇಂದು ತಾಳೆಗರಿಯಿಂದ ಕಂಪ್ಯೂಟರ್ ಪರದೆಯಲ್ಲಿ ಬಂದು ಕುಳಿತಿವೆ. ಈ ಕಾರ್ಯದಲ್ಲಿ ಮಠಗಳ ಪಾತ್ರ ಹೆಚ್ಚು ಮಹತ್ತರವಾದುದು. ಕನ್ನಡ ನಾಡಿನ, ಕನ್ನಡ ಧರ್ಮದ, ಕನ್ನಡ ಭಾಷೆಯ, ಜನಭಾಷೆಯ ಸುವರ್ಣಯುಗ ೧೨ನೆ ಶತಮಾನ. ಈ ಕಾಲದಲ್ಲಿದ್ದ ಹಸ್ತ ಪ್ರತಿಗಳು ಈ ನಾಡಿನ ಸಂಪತ್ತು ಎಂದು ಭಾವಿಸಿದ ಶ್ರೀಮಠಗಳು ಅವುಗಳನ್ನು  ಹುಳ ಹುಪ್ಪಟಗಳಿಂದ  ಮಳೆಗಾಳಿ ಬೆಂಕಿಯಿಂದ ಸಂರಕ್ಷಿಸಿ ಮುಂದಿನ ಪೀಳಿಗೆಗೆ' ಅವುಗಳ ಸುಧೆ ಬಿಡಿಸುತ್ತಿವೆ. ಕರ್ನಾಟಕದಲ್ಲಿ ಬಹುದೊಡ್ಡ ಪ್ರಮಾಣದ ವೀರಶೈವ ಸಮಾಜವಿದ್ದು, ಬ್ರಾಹ್ಮಣ ಜೈನರಿಗಿಂತ ಇವರು ಕನ್ನಡ ಭಾಷೆಗೆ ಹೊಸ ಸತ್ವ ತುಂಬಿದ್ದಾರೆ. ಅಲ್ಲದೆ ಭಾಷೆಯ ರಚನೆಯ ಜೊತೆಗೆ ಅದರ ಸಂರಕ್ಷಣೆ ಪೋಷಣೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಹಸ್ತಪ್ರತಿಗಳ ಸಂರಕ್ಷಣೆಯನ್ನು ವೈಜ್ಞಾನಿಕ ತಳಹದಿಯಲ್ಲಿ ಮಾಡಿದುದು ಈ ವೀರಶೈವ ಮಠಗಳ ಇನ್ನೊಂದು ಸಾಧನೆ.

೧೨ನೇ ಶತಮಾನದಲ್ಲಾದ ಸಾಮಾಜೋಧಾರ್ಮಿಕ ಆಂದೋಲನದ ಅಂಗವಾಗಿ ಕಲ್ಯಾಣದಲ್ಲಿ ಶೂನ್ಯಪೀಠ ಸ್ಥಾಪನೆಯಾಯಿತು. "ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು ಕಟ್ಟಿತು ಕಲ್ಯಾಣದಲ್ಲಿ ಮಹಾಮಠವು ಎಂದು ಬಣ್ಣಿಸಲಾಗಿದೆ. ಈ ಸಂದರ್ಭದಲ್ಲಿ ಬಸವಾದಿ ಪ್ರಮುಖ ಶರಣರು ಪರಸ್ಪರ ವಿಚಾರ ವಿನಿಮಯ ಚರ್ಚೆಮಾಡಿ ಸಾಮೂಹಿಕ ಸಾಹಿತ್ಯಸೃಷ್ಠಿಗೆ ಕಾರಣರಾದರು. ನಂತರ ಅಲ್ಲಲ್ಲಿ ಚದುರಿ ಹೋಗಿದ್ದ ಶರಣಸಾಹಿತ್ಯವನ್ನು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಕೂಡಿಹಾಕುವ ಸಂಕ್ರಮಣ ಆರಂಭವಾಯಿತು ಇದಕ್ಕಾಗಿ ನೂರೊಂದುಮಂದಿ ವೀರಶೈವ ಶರಣರು, ಯತಿಗಳು ತಮ್ಮ ತನುಮನಗಳನ್ನು ಸಮರ್ಪಿಸಿರುವುದು ಕಂಡುಬರುತ್ತದೆ. ೧೫ನೇ ಶತಮಾನದ ಅಂತಿಮ ಭಾಗದಲ್ಲಿ ವೀರಶೈವ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪ್ರೇರಕ ಶಕ್ತಿ ಎಂದರೆ ಅದು ತೋಂಟದಸಿದ್ದಲಿಂಗ ಯತಿಗಳು. ನಾಡಿನಾದ್ಯಂತ ಸಂಚರಿಸಿ ವೀರಶೈವ ಸಾಹಿತ್ಯ ಕ್ರೋಢಿಕರಣ ಮತ್ತು ಇದರ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಿದರು. ಇದರಿಂದ ಸಾವಿರಾರು ಮಠಗಳು ಹುಟ್ಟಿಕೊಂಡು ಇಂದಿಗೂ ಸಾಹಿತ್ಯ ಸೃಷ್ಟಿ, ಸಂಪಾದನೆ , ಪ್ರಸಾರ ನಡೆಸುತ್ತಿರುವುದನ್ನು ನಾವು ಗಮನಿಸಬಹುದು."[೧] "ವಿದ್ಯಾಂಸರೊಬ್ಬರು ವೀರಶೈವ ಧರ್ಮವೆಂದರೆ ಕನ್ನಡ ಧರ್ಮ ವೀರಶೈವಸಾಹಿತ್ಯವೆಂದರೆ ಕನ್ನಡ ಸಾಹಿತ್ಯ' ಎಂದಿದ್ದಾರೆ. ಈ ವೀರಶೈವ ಮಠಾಧಿಪತಿಗಳು ಧಾರ್ಮಿಕ ಅನುಯಾಯಿಗಳಾದಂತೆ ಶಿಕ್ಷಣ,ಸಾಹಿತ್ಯ ಪ್ರೇಮಿಗಳಾಗಿದ್ದರು. ವೀರಶೈವ ಪುರಾಣಗಳನ್ನು ರಚಿಸುವ ಮತ್ತು ಸಂರಕ್ಷಿಸುವ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ.

ಕನ್ನಡ ಸಾರಸ್ವತ ಲೋಕದಲ್ಲಿ ವೀರಶೈವಮಠಗಳು ಮತ್ತು ವೀರಶೈವಕವಿಗಳ ಸಾಧನೆ ವರ್ಣಿಸಲದಳ ಏಕೆಂದರೆ ವಿರೂಪಾಕ್ಷ ಪಂಡಿತ , ಕಲ್ಲು ಮಠದ ಪ್ರಭುದೇವ, ಷಡಕ್ಷರಿ ಉರಿಲಿಂಗ ಪೆದ್ದಿ ಮುಂತಾದ ಮಠಾಧಿಪತಿಗಳು ಪ್ರೌಢಕವಿಗಳಾಗಿ ಸಾಹಿತ್ಯ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ. ಇನ್ನು ಕೆಲವು ವೀರಶೈವ ಕವಿಗಳು ಈ ಮಠಾಧಿಪತಿಗಳ ಆಶ್ರಯದಲ್ಲಿದ್ದು ಸಾಹಿತ್ಯ ಸೃಷ್ಠಿ ಮಾಡಿದ ನಿದರ್ಶನಗಳಿವೆ. ಹೀಗಾಗಿ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ನೂರಾರು ಕೃತಿಗಳು ಹುಟ್ಟಿಕೊಂಡು ಸಾಹಿತ್ಯ ಶ್ರೀಮಂತಿಕೆಗೆ ಕಾರಣವಾಯಿತು.ಸೃಷ್ಟಿ,ಸಂಕಲನ,ಸಂಪಾದನ ಮತ್ತು ಪ್ರಸಾರಗಳೆಂಬನೆಲೆಗಳಲ್ಲಿ ಸಾಹಿತ್ಯ ಬೆಳವಣಿಗೆಯನ್ನು ಕಂಡಿತು. ಪ್ರಾಚೀನ ಕೃತಿಗಳನ್ನು ಕಾಲಕಾಲಕ್ಕೆ

---

೧. ಮಹಾಸಂಗಮ ಸಂ.ಮಲೆಯೂರು ಗುರುಸ್ವಾಮಿ ಲೆ.ಡಾ.ಕ.ರವೀಂದ್ರನಾಥ ಪುಟ-೮೭

ನಾಶವಾಗದಂತೆ ಉಸಿಕೊಂಡು ಬರಬೇಕೆಂಬ ಕಾರಣ ಅನೇಕ ಮಠಮಾನ್ಯಗಳು ಅವುಗಳ ಪ್ರತಿ ಮಾಡಿಸಿದ ನಿದರ್ಶನಗಳಿವೆ.ಹೆಚ್ಚಿನಮಾಹಿತಿಗೆನಾವು ಡಾ.ಕೆರವೀಂದ್ರನಾಥರ 'ಕರ್ನಾಟಕದಮಠಗಳು ಮತ್ತು ವೀರಶೈವ ಸಾಹಿತ್ಯ' ಕೃತಿಯನ್ನು ನೋಡಬಹುದು.

ವೀರಶೈವ ಮಠಗಳು ಸೃಜನ-ಸಂಗ್ರಹ-ಸಂಕಲನ ಹಾಗೂ ಸಂಪಾದನೆ ನೆಲೆಗಳಲ್ಲಿ ಸೇವೆಗೈದಿವೆ. ಬುಹುಶಃ ಅಪರೂಪಕ್ಕೆ ವೀರಶೈವ ಮಠಾಧಿಪತಿಗಳು ಶಾಸನಗಳನ್ನು ರಚಿಸಿರುವ ಶಾಸನ ಕವಿಗಳಾಗಿದ್ದರೆಂಬುದಕ್ಕೆ ಒಂದೆರಡು ನಿದರ್ಶನಗಳು ಕಂಡುಬರುತ್ತವೆ "ಕ್ರಿ.ಶ ೧೧೫೫ರ ಮುದುಗೆರೆ ಗ್ರಾಮದ ಈಶ್ವರ ದೇವಾಲಯದ ಸಮೀಪದ ಕಲ್ಲಿನ ಮೇಲೆ ೮೭ ಸಾಲುಗಳ ದೀರ್ಘವಾದ ಶಾಸನದಲ್ಲಿ ನಾಗರಾಶಿ ಪಂಡಿತನ ಹೆಸರು ಕಂಡು ಬರುತ್ತದೆ. 'ಇ ಸಾಶನವಂ ಬರೆದ ಮುದುಗೆರೆಯ ನಾಗರಾಶಿ ಪಣ್ಡಿತ ಎಂಬ ಉಲ್ಲೇಖ ದೊರಕುತ್ತದೆ. ಇದರ ಪ್ರಕಾರ ಲಾಕುಳಶೈವ ಕೇಂದ್ರವಾಗಿದ್ದ ಇದಕ್ಕೆ ಸ್ಥಾನಪತಿಯಾದ ನಾಗರಾಶಿ ಪಂಡಿತ ಚಿಕ್ಕ ಕಡಲೂರು ಗ್ರಾಮದ ಶಾಸನವ ಬರೆದ ಮಠಾಧಿಪತಿ ಕವಿ ಎಂದು ಹೇಳಬಹುದು ಇದರಲ್ಲದೆ ಇನ್ನೂ ಅನೇಕ ಮಠಾಧೀಪತಿಗಳ ಹೆಸರುಗಳು ಬರುತ್ತದೆ ಭಾತರದಾದ್ಯಂತ ಅನೇಕ ಶೈವ ವೀರಶೈವ ಮಠಗಳು ಸಾಹಿತ್ಯ ಪ್ರಸಾರ ಪ್ರಕಟಣೆಗೆ ಹುಚ್ಚು ಒತ್ತು ಕೊಟ್ಟದ್ದವು ಎಂಬುದನ್ನು ಅಧ್ಯಯನ ಮೂಲಕ ತಿಳಿಯಬಹುದು."[೨]

"ಪ್ರಾಚೀನ ಕಾಲದ ಮಠಗಳಂತೆ ಮಠಗಳು ಕಾಲಕಾಲಕ್ಕೂ ತಕ್ಕಂತೆ ಬದಲಾವಣೆಗೆ ಒಳಗಾಗುತ್ತ ಹಿಂದಿನ ಪರಂಪರೆಯ ಮಠಗಳು ನಡೆಸಿಕೊಂಡು ಬಂದಿದ್ದ ಪ್ರಸಾರ ಧರ್ಮ ಕಾರ್ಯಗಳನ್ನು ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಮುಂದುವರಿದು ಸಾಹಿತ್ಯವನ್ನು ಜನಸಾಮಾನ್ಯರ ಮಟ್ಟಕ್ಕೆ ಕೊಂಡೊಯ್ದು ಅದ್ಬುತ ಪ್ರಗತಿಯನ್ನು ಸಾಧಿಸಿವೆ. ಅಷ್ಟಲ್ಲದೆ ವಿಶೇಷವಾಗಿ ವೀರಶೈವ ಮಠಗಳು ಸರ್ವ ಧರ್ಮಿಯರಿಗೂ ಅವಕಾಶ ಕಲ್ಪಿಸಿಕೊಟ್ಟವೆ. ಧರ್ಮದ ಚೌಕಟನ್ನು ದಾಟಿ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಪ್ರಾಶಸ್ತ್ಯ ನೀಡಿವೆ ಕೆಲ ಮಠಗಳು ಸಾಮಾಜಿಕ ಜೀವನಕ್ಕೆ ಹೊಸ ಆಯಾಮ ನೀಡಿವೆ. ಕೈಗಾರಿಕೆ, ತೋಟಗಾರಿಕೆ, ಬ್ಯಾಕಿಂಗ್, ಶಿಕ್ಷಣ ಗ್ರಾಮೋದ್ದಾರ ಮುಂತಾದ ಬಹುಪಯೋಗಿ ಕಾರ್ಯಕ್ರಮ ಹಾಕಿಕೊಂಡು ಮಾಸಿಕ, ಪಾಕ್ಷಿಕ, ಸಾಪ್ತಾಹಿಕ, ಶಿವಾನುಭವಗೋಷ್ಠಿಗಳನ್ನು ಏರ್ಪಡಿಸಿ ಜನಪರ ಹಾಗೂ ಸಮಕಾಲಿನ ವಿಷಯಗಳಿಗೆ ಸ್ಪಂದಿಸಿ ಜನಸಂಪರ್ಕ ಬೆಳೆಸಿಕೊಂಡಿವೆ."[೩]

---

೨. ಮಹಾಸಂಗಮ ಲೆ.ಡಾ.ಕೆ.ರವೀಂದ್ರ ನಾಥ್ ಪುಟ-೯೦
೩. - ಅದೇ - ಪುಟ-೯೯

ಸಾಹಿತಿ–ಕಲಾವಿದರನ್ನ ಗೌರವಿಸುತ್ತಿವೆ ಸಾಹಿತ್ಯ ಸೇವೆಯಲ್ಲಿ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡ ನೂರಾರು ಮಠಗಳಿವೆ. ಉತ್ತರಕರ್ನಾಟಕದ ಗದುಗಿನತೊಂಟಾದ್ಯಾರ್ಯ, ಹುಬ್ಬಳ್ಳಿಯ ಮೂರುಸಾವಿರಮಠ, ಧಾರವಾಡದ ಮುರುಘಮಠ, ಸಿದ್ಧ ಗಂಗಾಮಠ, ಸಿರಿಗೆರೆಮಠಬೃಹನ್ಮಠ,ಹಿರೇಮಠ, ಭಾಲ್ಕೀಮಠ,ಮುಂಡರಗಿ ಅನ್ನದಾನೇಶ್ವರಮಠ,ಚಿತ್ರದುರ್ಗದ ಬೃಹನ್ಮಠ, ರಂಭಾಪುರಿ ಪೀಠ, ನವಲಗುಂದ ಗವಿಮಠ ಕಿತ್ತೂರು ಕಲ್ಮಠ, ಚರಂತಿಮಠ, ಅರಬಾವಿ ಮಠ, ತಾಳಗುಪ್ಪ ಮಠ, ಸವದತ್ತಿ ಕಲ್ಮಠ, ಕಾರಪುರ , ಚರಂತಿ ಮಠ, ತಾಳಗುಪ್ಪ ಮಠ, ಸವದತ್ತಿ ಕಲ್ಮಠ, ಸುತ್ತೂರು ಮಠ, ದೇವನೂರು ಮಠ, ಜತದಕಟ್ಟೆ ಮಠ, ಹೀಗೆ ಅನೇಕ ಮಠಗಳಿವೆ. ಈ ವೀರಶೈವ ಮಠಗಳು ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸುವ್ಯವಸ್ಥಿತ ಹಸ್ತಪ್ರತಿ ಭಂಡಾರಗಳನ್ನು ಹೊಂದಿವೆ. ಜೈನ–ವೈದಿಕ ಧರ್ಮೀಯರಿಗಿಂತ ವಿಪುಲ ಸಂಖ್ಯೆಯಲ್ಲಿ ವೀರಶೈವಮಠಗಳು ಹಸ್ತಪ್ರತಿಭಂಡಾರವನ್ನು ಹೊಂದಿರುವುದಕ್ಕೆ ಕಾರಣವನ್ನು ಡಾ.ಎಂ.ಕಲಬುರ್ಗಿಯವರು ಹೀಗೆ ಹೇಳುತ್ತಾರೆ "ಜೈನರ ಧರ್ಮಭಾಷೆ ಪ್ರಾಕೃತ, ಮಾತೃ ಭಾಷೆ ಕನ್ನಡ–ಬ್ರಾಹ್ಮಣರ ಧರ್ಮಭಾಷೆ ಸಂಸ್ಕೃತ, ಮಾತೃಭಾಷೆ ಕನ್ನಡ ಆದರೆ ವೀರಶೈವರ ಧರ್ಮಭಾಷೆ ಕನ್ನಡ, ಮಾತೃಭಾಷೆಯು ಕನ್ನಡವಾಗಿರುವುದು. ಇದರಿಂದಾಗಿ ವೀರಶೈವರಿಗೆ ಕನ್ನಡಸಾಹಿತ್ಯ ಕನ್ನಡಧರ್ಮವಾಗಿ ಪರಿಣಮಿಸಿತು. ಪ್ರಾಚೀನ ಕಾಲದಿಂದಲೂ ಈ ಧರ್ಮೀಯರು ಹಿರೇಮಠಗಳು, ಹಳ್ಳಿಹಳ್ಳಿಗಳಲ್ಲಿ ವಿದ್ಯಾದಾನ ಮಾಡುವ ಕೇಂದ್ರಗಳಾಗಿ ಸಾಹಿತ್ಯ ಪೋಷಣೆಯ ಕೆಲಸ ಮಾಡಿವೆ. ಇಂದು ವಿಶ್ವವಿದ್ಯಾನಿಲಯದಲ್ಲಿರುವ ಅಧ್ಯಾಪಕವರ್ಗ,ಸಂಶೋಧಕವರ್ಗ, ಸಾಹಿತಿಗಳಲ್ಲರೂ ಕೆಲವಾರು ಸಂದರ್ಭಗಳಲ್ಲಿ ಮಠಾಶ್ರಯದಲ್ಲೆ ಬೆಳೆದು ಸಾಹಿತ್ಯ ಸೃಷ್ಟಿಸಿರುವುದು ಕಾಣಬಹುದು.

ಇದೇ ರೀತಿ ಸಾಹಿತ್ಯ ಪ್ರಸಾರ ಮತ್ತು ಪ್ರಕಟಣೆ ಪರಂಪರೆಯನ್ನು ಅನುಸರಿಸಿ ಬಂದಿದ್ದು ಮೈಸೂರು ಜಿಲ್ಲೆಯ ವೀರಶೈವಮಠಗಳು ಮತ್ತು ಮಠಾಧೀಶಪತಿಗಳಲ್ಲಿ ಪ್ರಮುಖವಾಗಿ ಸುತ್ತೂರು ಶ್ರೀಗಳು, ದೇವನೂರ ದಾಸೋಹ ಮಠದ ಶ್ರೀಗಳು, ಅರಮನೆ ಜಪದಕಟ್ಟೆ ಶ್ರೀಗಳು, ,ಪಂಚಗವಿಮಠದ ಶ್ರೀಗಳು ಶ್ರೀಕುಂದೂರು ಮಠದ ಶ್ರೀಗಳು ಶ್ರೀಹೊಸಮಠದ ಶ್ರೀಗಳು ಹೀಗೆ ಅನೇಕ ಪೀಠಾಧಿಪತಿಗಳು ಸ್ವತಃ ಪಂಡಿತ ವಿದ್ವಾಂಸರು, ಕವಿಗಳು ಆಗಿದ್ದರು. ಈ ಎಲ್ಲ ಮಠಗಳ ಮಠಾದೀಶರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ಆದ ಕಾಣಿಕೆ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲೆಯ ವೀರಶೈವ ಮಠಗಳ ವತಿಯಿಂದ ನಡೆದಿರಬಹುದಾದ ಸಾಹಿತ್ಯಕ ಚಟುವಟಿಕೆಗಳನ್ನು ಕುರಿತು ಮುಂದೆ ಪರಿಶೀಲಿಸಲಾಗಿದೆ. ಈ ಪ್ರಾಂತ್ಯದಲ್ಲಿರುವ ಸುಮಾರು ೧೦೦ಕ್ಕೂ ಹೆಚ್ಚು ಮಠಗಳಲ್ಲಿ ೧೦ಕ್ಕಿಂತ ಹೆಚ್ಚು ಮಠಗಳು ಈ ಸಾಹಿತ್ಯ ಕೃಷಿಯಲ್ಲಿ ತೊಡಗಿ ಕನ್ನಡ ಮತ್ತು ಸಂಸ್ಕೃತ ಜ್ಞಾನವವನ್ನು ಪ್ರಸಾರಮಾಡಿ ಕನ್ನಡದ ಕಂಪನ್ನು ಸುತ್ತಲು ಹರಡಿದ್ದಾರೆ.

**೧. ಸುತ್ತೂರು ಮಠ :** ಮೈಸೂರು ಪ್ರಾಂತ್ಯದಲ್ಲಿ ಪ್ರಮುಖವಾಗಿ ಪ್ರಸಿದ್ಧವಾಗಿ ಕಂಡುಬರುವ ವೀರಶೈವಮಠ ಯಾವುದು ಎಂದರೆ ತಕ್ಷಣ ಹೇಳುವುದು ಶ್ರೀ ಸುತ್ತೂರು ಮಠ. ಇದು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಎಲ್ಲ ರಂಗದಲ್ಲೂ ಸೇವೆ ಸಲ್ಲಿಸುತ್ತಿರುವುದು ಕಂಡುಬರತ್ತಿದೆ. ಅಷ್ಟಲ್ಲದೆ ಸಾಹಿತ್ಯರಂಗದಲ್ಲಿ  ಶ್ರೀಮಠದ ಗುರುಪರಂಪರೆಯ ಶ್ರೀಗಳು ಅಪಾರವಾದ ಕೊಡುಗೆ ನೀಡಿದ್ದಾರೆ.

"ನಿರಾಶ್ರಯಾನಿ ಶೋಭಂತೇ ಪಂಡಿತಾ ವನಿತಾ ಲತಾಃ ಎಂಬ ಪ್ರಾಚೀನಯುಕ್ತಿಯು ಕಲಾವಿದರಿಗೆ ಕಲೆಗಳ ಬೆಳವಣಿಗೆಗೆ ಉದಾರಾಶ್ರಯದ ಅಗತ್ಯವಿದೆಯಂಬುದನ್ನು ಉದ್ಘೋಷಿಸುತ್ತಿದೆ. ಆಶ್ರಯ ದೊರೆಯದಿದ್ದಾಗ ಕಲೆಯು ಕುಂಠಿತಗೊಳ್ಳುತ್ತದೆ. ಕಲಾವಿದರು ಕೈಕಟ್ಟಿ ಕುಳಿತುಕೊಳ್ಳುತ್ತಾರೆ ಎಂದೇನೊ ಇದರ ಅರ್ಥವಲ್ಲ ಯಾರ ಅಪೇಕ್ಷೆಯನ್ನು ನಿರೀಕ್ಷಿಸದ ತಮ್ಮ ಸಹಜ ಸ್ವತಂತ್ರ ಪ್ರತಿಭಾಶಕ್ತಿಯನ್ನು ಯಾರಿಗೂ ಮಾರಿಕೊಳ್ಳದೆ ಕಲಾನಿರ್ಮಿತಿಗೈದ ನಿದರ್ಶನಗಳಿವೆ. ಕನ್ನಡ ನಾಡಿನ ಅನೇಕ ಗುರು ಪೀಠಗಳು ಧರ್ಮ ರಕ್ಷಣೆಗಾಗಿ–ಧರ್ಮ ಪ್ರಸಾರಗಳ ಜೊತೆಗೆ ಸಾಹಿತ್ಯ–ಸಂಸ್ಕೃತಿಗಳ ಬೆಳವಣಿಗೆಗೂ ವಿಶಿಷ್ಟ ಪೋಷಣೆ ನೀಡಿ ಮಾನವ ಕಲ್ಯಾಣವನ್ನು ಹೆಚ್ಚಿಸುತ್ತ ಬಂದಿರುವುದು ಗಮನಾರ್ಹ, ಧರ್ಮೋದ್ಧಾರಕ್ಕಾಗಿ ಸ್ಥಾಪಿತವಾದ ಸುಮಾರು ಸಾವಿರ ವರ್ಷಗಳ ಪ್ರಾಚೀನತೆಯನ್ನು ಒಳಗೊಂಡು, ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಸುತ್ತೂರು ಶ್ರೀ ವೀರಸಿಂಹಾಸನ ಜಗದ್ಗುರು ಮಹಾಪೀಠವು ಮಾನವ ಕಲ್ಯಾಣವನ್ನು ಬಯಸುತ್ತ ಬಂದಿದೆ. ಕಲೆ–ಸಂಸ್ಕೃತಿ–ಧರ್ಮ ಪ್ರಸಾರದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕಾಣಿಕೆ ಸಲ್ಲಿಸುತ್ತಾ ಬಂದಿರುವುದು ನಮಗೆ ತಿಳಿಯುತ್ತದೆ."೪**ಸುತ್ತೂರು ಶ್ರೀಜಗದ್ಗುರು ಸಿಂಹಾಸನಾಧೀಶ್ವರರು ಶಿವಯೋಗ ಮಹಾತಪೋಧನರು, ಘನವಿದ್ವಾಂಸರು ಆದ ಶ್ರೀಗಳಿಂದ ಈ ಮಠವು ತನ್ನ ಸೇವಾಕ್ಷೇತ್ರವನ್ನು ವಿಸ್ತರಿಸಿಕೊಂಡು ಬೆಳೆಯುತ್ತಿದೆ. ಈ ಗುರು ಪರಂಪರೆಯಲ್ಲಿ ಬಂದಂಥ ಗುರುಗಳು ತಮ್ಮ ತಪಃಶಕ್ತಿಯಿಂದ ಆಯಾ ಕಾಲದ ಜನತೆಯ ಮೇಲೆ ಅಸಾಧಾರಣವಾದ ಪ್ರಭಾವವನ್ನು ಬೀರಿ ಶಿವಪಥದತ್ತ ತಿರುಗಿಸಿದರು. ತಮ್ಮ ಆಧ್ಯಾತ್ಮಿಕ ಶಕ್ತಿಯ ಮೂಲಕ ಅಂದಿನ ರಾಜ ಮಹಾರಾಜರನ್ನು ಸನ್ಮಾರ್ಗದೆಡೆಗೆ ಸೆಳೆದು ಅವರಿತ್ತ ನೆರವನ್ನು ಲೋಕಕಲ್ಯಾಣಕ್ಕಾಗಿ ಬಳಸಿಕೊಂಡರು. ಜನರ ನಡೆನುಡಿಗಳನ್ನು ತಿದ್ದಿ ಅವರನ್ನು ಬಾಳನ್ನು ಹಸನುಗೈಯಲು, ಧರ್ಮ–ಸಂಸ್ಕೃತಿ ಶುಚಿಗೊಳಿಸಲು, ಧರ್ಮದ ರಕ್ಷಣೆಗಾಗಿ ತಮ್ಮ ಶಾಖಾಮಠಗಳನ್ನು ಅಲ್ಲಲ್ಲಿ ಸ್ಥಾಪಿಸಿ

---

೪. ಅಚರ್ನ ಎಸ್ ನಂಜುಂಡಯ್ಯ, ಪು.೧೦೯–೧೧೦

ಅಪಾರವಾದ ಶಿಷ್ಯ ಸಂಪತ್ತು ಪಡೆದಿದ್ದರು. ಜ್ಞಾನದಾಹಿಗಳಿಗೆ ಅನುಭಾವದ ಅರವಟ್ಟಿಗೆಗಳನ್ನು ತೆರೆದರು. ಕಾವ್ಯ-ನಾಟಕ-ಶಾಸ್ತ್ರ-ಸಂಗೀತಾ-ನೃತ್ಯ-ಚಿತ್ರ-ಶಿಲ್ಪ ಮತ್ತು ಕೀರ್ತನೆ ಇತ್ಯಾದಿಗಳಲ್ಲಿ ಪ್ರಾವೀಣ್ಯತೆ ಪಡೆದವರಿಗೆ ಸದಾಕಾಲವು ಉದಾರಾಶ್ರಯವನ್ನಿತ್ತು, ಕನ್ನಡ ಸಾಹಿತ್ಯ-ಸಂಸ್ಕೃತಿ, ಕಲೆಗಳಿಗೆ ವಿಶೇಷ ಪ್ರೋತ್ಸಹ ನೀಡಿದರು. ಸ್ವಯಂ ಪ್ರತಿಭಾನ್ವಿತ ಶಿವಕವಿಗಳಾಗಿದ್ದ, ಈ ಪೀಠಾಧಿಶ್ವರರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಲೋಕಕ್ಕೆ ಸತ್ವಹಿತವಾದ ಕೃತಿಗಳನ್ನಿತ್ತು ಸಾಹಿತ್ಯಸೇವೆ ಮಾಡಿ ಈ ಪೀಠ ಪರಂಪರೆಯನ್ನು ಹೆಚ್ಚಿಸಿದರು. ಈವಿಚಾರವಾಗಿ ಮೈಸೂರು ಶಾಸನ ಇಲಾಖೆಯ ಡೈರೆಕ್ಟರರವರಾದ ಶ್ರೀ ಆರ್. ನರಸಿಂಹಚಾರ್ಯರು ತಮ್ಮ ೧೯೧೮ನೇ ವರ್ಷದ ವರದಿಯಲ್ಲಿ "ಹಿಂದೆ ಈ ಮಠದ ಸ್ವಾಮಿಗಳವರು ವಿದ್ವಾಂಸರಾಗಿಯೂ ಮತ್ತು ಕೆಲವು ಮುಖ್ಯಗ್ರಂಥಗಳ ರಚಿಸುವುದರ ಮೂಲಕ ಕವಿಗಳಾಗಿಯೂ ಇದ್ದರೆಂಬುದು ತಿಳಿದು ಬರುತ್ತದೆ" ಎಂದಿದ್ದಾರೆ.

ಶ್ರೀ ಸುತ್ತೂರು ಗುರುಪರಂಪರೆಯಲ್ಲಿ ಬೆಳಗಿದಂತ ಶ್ರೀಗುರುಚರಮೂರ್ತಿಗಳೆಲ್ಲರು ಸಾಮಾನ್ಯವಾಗಿ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಘನ ಪಂಡಿತರಾಗಿದ್ದು ಕಾವ್ಯ-ಶಾಸ್ತ್ರಗಳಲ್ಲಿ ಹಿಡಿತ ಹೊಂದಿದ್ದರೆಂಬ ವಿಚಾರವು ಪೀಠದ ಇತಿಹಾಸದಿಂದಲೂ ಉಪಲಬ್ದ ಕೃತಿಗಳಿಂದಲೂ ನಮಗೆ ತಿಳಿದು ಬರುತ್ತದೆ. ಆಧ್ಯಾತ್ಮಿಕತೆ ಮತ್ತು ಶಾಸ್ತ್ರ ಪ್ರೌಢಿಮೆಯಲ್ಲಿ ಗುರುಗಳೆಲ್ಲರು ತಮ್ಮ ತಪೋಬಲದಿಂದ ಸನಾತನ ಆಚಾರ-ವಿಚಾರ'ಗಳನ್ನು ಪರಾಮರ್ಶಿಸಿ ಹಲವಾರು ಕೃತಿಗಳನ್ನು ರಚಿಸಿರುವುದನ್ನು ನಾವು ಮುಂದೆ ಗಮನಿಸಬಹುದು. ಗ್ರಂಥರಚನೆ ಗ್ರಂಥಸಂಪಾದನೆ ಮತ್ತು ಗ್ರಂಥಪ್ರಕಟಣೆಯ ಮೂಲಕ ಅವರು ಸಾಧಿಸಿರಬಹುದಾದ ಸಾಹಿತ್ಯ ಕೃಷಿಯೇ ಪವಿತ್ರ ಕಾಯಕದ ಪರಿಚಯಕ್ಕೆ ಹೊರಟಾಗ ತೀವ್ರ ಅಲ್ಲದಿದ್ದರೂ ಸ್ವಲ್ಪ ಮಟ್ಟಿನ ನಿರಾಶೆಯೇ ನಮ್ಮನ್ನ ಮೊದಲು ಎದುರುಗೊಳ್ಳುತ್ತದೆ. ಏಕೆಂದರೆ ಅವರು ರಚಿಸಿರುವ ಕೃತಿಗಳ ಬಗೆಗೆ ಉಲ್ಲೇಖವು ಬೇರೆಡೆ ಲಭ್ಯವಾಗಿದ್ದರೂ, ಆ ಕೃತಿಗಳು ನಮಗೆ ಲಭ್ಯವಿಲ್ಲ, ಆದರೂ ಈಗ ಉಪಲಬ್ದವಿರುವರುವಂತ ಕೈಬೆರಳೆಣಿಕೆಯ ಕೆಲವು ಅತ್ಯಮೂಲ್ಯ ಕೃತಿಗಳೇ ಶ್ರೀಸುತ್ತೂರು ಗುರುಪರಂಪರೆಯ ಸಾಹಿತ್ಯ ಸೇವೆಯನ್ನು ಬೆಳಗುವ ಜ್ಯೋತಿಯಾಗಿ ನಮ್ಮ ಕಣ್ಣು ಮುಂದೆ ಕಂಡುಬರುತ್ತವೆ. ಈ ಪೀಠದ ಗುರುಗಳ ಸಾಹಿತ್ಯ ಸೇವೆಯನ್ನು ವಿಶಾಲವಾಗಿಲ್ಲದ್ದರೂ ಸೂಕ್ಷ್ಮವಾಗಿ ಮುಂದೆ ಗಮನಿಸಬಹುದು.

**ರಾಜಗುರು ಈಶಾನೇಶರು – ಕ್ರಿ.ಶ ೧೦೩೨**

ಸಾಹಿತ್ಯಕ್ಕೆ ಸತ್ವಪೂರ್ಣ ಕೊಡುಗೆಗಳನ್ನು ನೀಡಿದ ಸುತ್ತೂರು ಜಗದ್ಗುರು ಪೀಠಾಚಾರ್ಯರುಗಳಲ್ಲಿ ಮೊದಲು ಕಣ್ಣಿಗೆ ಬೀಳುವವರು ಕೆಲವರಾದರೂ, ಅವರಲ್ಲಿ ಅಮೂಲ್ಯವಾದ ಕಾಣಿಕೆಯನ್ನು ಕೊಟ್ಟು ಪ್ರಸಿದ್ಧರಾದವರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ತರುವಾಯ ಪೀಠಕ್ಕೆ ಬಂದ ಎರಡನೆಯ ಅಧಿಪತಿಗಳಿಂದ ಈಶಾನೇಶ್ವರಒಡೆಯರು ಅತ್ಯಂತ ಪ್ರಭಾವಶಾಲಿಗಳಾಗಿ ವಿರಾಜಿಸಿದರು. ಇವರು ರಾಜೇಂದ್ರಚೋಳ "(ಕ್ರಿ.ಶ ೧೦೧೨–೧೦೧೫) ಹಾಗೂ ರಾಜಾಧಿರಾಜಚೋಳ (ಕ್ರಿ.ಶ ೧೦೧೮–೧೦೫೫) ಭೂಪಾಲರುಗಳ ರಾಜಗುರುಗಳೆನಿಸಿದರು.

ಈಶನಾಜ್ಞೆಯನಾಂತು ನೆರೆ ಧರ
ಣೀಶ ರಾಜೇಂದ್ರಾಖ್ಯಚೋಳ ನ
ರೇಶಂ ಸಲಹುತೆ ಶಿಲಾಮಠದೊಳಗೆ ನೆಲಸಿ"[೫]

ಅನೇಕ ವಿದ್ವನ್ಮಣಿಗಳಿಗೆ ತಮ್ಮ ಜ್ಞಾನಸತ್ರದಲ್ಲಿ ಆಶ್ರಯ ನೀಡಿ ಪ್ರಖ್ಯಾತರಾದ ಇವರು ಆ ಕಾಲದಲ್ಲಿ ಬಹುಜನಪ್ರಿಯರಾದ ಜಗದ್ಗುರುಗಳಾಗಿ ಎಲ್ಲರಿಂದಲೂ ಪರಮಪೂಜ್ಯತೆಯನ್ನು ಪಡೆದಿದ್ದರೆಂಬುದು ಶಾಸನಗಳಲ್ಲಿ ಉಕ್ತವಾಗಿದೆ. "ಒಂದನೇ ರಾಜೇಂದ್ರಚೋಳನ ದಿಗ್ವಿಜಯಗಳನ್ನು, ಆತನ ಚಕ್ರಾಧಿಪತ್ಯದ ವಿಸ್ತಾರವನ್ನೂ ಸಾರುವ ಶಿಲಾಶಾಸನಗಳು ಅಲ್ಲಲ್ಲಿ ದೊರೆತಿವೆ."[೬] ಸುತ್ತೂರಿನಲ್ಲಿರುವ ಶಿಲಾಶಾಸನವು ಈಶಾನೇಶ್ವರ ಒಡೆಯರಿಗೂ ರಾಜೇಂದ್ರಚೋಳಚಕ್ರೇಶನಿಗೂ ಇದ್ದ ಗುರು–ಶಿಷ್ಯ ಬಾಂಧವ್ಯದ ಪರಾಕಾಷ್ಠತೆಯನ್ನು ಪ್ರಕಾಶಪಡಿಸುತ್ತದೆ. ಅದರಲ್ಲಿ ಶಕವರುಷ ೯೫೫ ನೆಯ ಆಂಗಿರಸ ಸಂವತ್ಸರ ಕಾರ್ತಿಕ ಮಾಸದ ಹುಣ್ಣಿಮೆಯಂದು (೨೩–೧೦–೧೦೩೨ನೇ ಶಾಸನ, ಇಲಾಖೆಯವರ ಅಭಿಪ್ರಾಯ) "ರಾಜೇಂದ್ರ ಚೋಳದೇವನೂ ಶ್ರೋತ್ರಿಯೂರುಗ್ರಾಮದ ಮಹಾಜನರೂ ರಾಜಗುರುಗಳಾದ ಈಶಾನೇಶ್ವರ ಒಡೆಯರಿಗೆ ದತ್ತಿಗಳನ್ನು ಬಿಟ್ಟಂತೆ ಉಲ್ಲೇಖವಿದೆ."[೭] ದುದರಿಂದ ಸುತ್ತೂರು ಪೀಠಾಧೀಶ್ವರರಾದ ಈಶಾನೇಶ್ವರ ಒಡೆಯರು ಕ್ರಿ.ಶ ೧೦೩೨ರ ಸುಮಾರಿನಲ್ಲಿದ್ದರೆಂಬುದು ಸ್ಪಷ್ಟವಾಗಿದೆ.

---

೫. ಅರ್ಚನ –ಸಂ.ಡಾ.ಎಚ್.ಪಿ.ಮಲ್ಲೇದೇವರು ಪುಟ–೧೧೧
೬. Mysore Gazetear Vol II Page 999-1035
೭. ಶಿವರಾತ್ರಿ ಶಿವಾಚಾರ್ಯ ಅನುಬಂಧ ಪು.೨೩೦–೨೩೧

ಉದ್ದಾಮ ಪಂಡಿತರಾಗಿದ್ದ ಈಶಾನ ಗುರುಗಳವರು ಶ್ರೇಷ್ಠ ಶಿವಕವಿಗಳಾಗಿದ್ದು ಸಂಸ್ಕೃತದಲ್ಲಿ ರೇವಣಸಿದ್ಧೇಂದ್ರದೇಶಿಕರ ಪರಮ ಲೀಲಾಕಥನವೆಂಬ ಪ್ರೌಢಗ್ರಂಥವನ್ನು ರಚಿಸಿರುವರು ಎಂದು ಬೊಮ್ಮರಸನ ರೇವಣಸಿದ್ಧೇಶ್ವರ ಪುರಾಣದಿಂದ ತಿಳಿದು ಬರುತ್ತದೆ ಇದರಿಂದ ರೇವಣಸಿದ್ಧರ ಚರಿತ್ರೆಯನ್ನು ಸಂಸ್ಕೃತ ಸಾರಸ್ವತಲೋಕಕ್ಕೆ ಅರ್ಪಿಸಿದುದಲ್ಲದೆ, ಮುಂದೆ ಬಂದ ಹರಿಹರ–ಬೊಮ್ಮರಸ ಮೊದಲಾದ ಕವಿಗಳಿಗೂ ಕನ್ನಡದಲ್ಲಿ ಕೃತಿಗಳನ್ನು ರಚಿಸುವುದಕ್ಕೆ ಸ್ಪೂರ್ತಿಯನ್ನು ನೀಡಿದ್ದಾರೆನ್ನಬಹುದು. ಅಲ್ಲದೆ ಕನ್ನಡದಲ್ಲಿಯೂ ಅನೇಕ ಉದ್ಗ್ರಂಥಗಳನ್ನು ಇವರು ರಚಿಸಿರಬಹುದೆಂದು ಊಹಿಸಲೂಬಹುದು.

**ಸಿದ್ಧನಂಜದೇಶಿಕೇಂದ್ರರು – ಕ್ರಿ.ಶ ೧೧೭೦–೧೨೪೦**

ಕಲ್ಯಾಣದ ಕ್ರಾಂತಿಯ ತರುವಾಯ ಸುತ್ತೂರು ಕ್ಷೇತ್ರವು ಶ್ರೀ ಸಿದ್ಧನಂಜದೇಶಿಕೇಂದ್ರರ ನೇತೃತ್ವದಲ್ಲಿ ಎರಡನೇಯ ಅನುಭವಕೇಂದ್ರವೆನಿಸಿ ಜ್ಞಾನಾನ್ನದಾಸೋಹಗಳನ್ನು ನಡೆಸುತ್ತಾ ಶರಣಧರ್ಮವನ್ನು ನಾಡಿನಲ್ಲೆಲ್ಲಾ ಹರಡಿತು. "ಕ್ಷಿತಿಯೊಳೊಲ್ದು ನಿರಾಕುಳದಿ ಶಿವಮತವನುದ್ದರಿಸುತೆ" ಪ್ರಸಿದ್ಧಿಪಡೆದ ಶ್ರೀ ಸಿದ್ಧನಂಜ ದೇಶಿಕೇಂದ್ರರು ಸುತ್ತೂರು ಕ್ಷೇತ್ರಾಧಿಪತಿಗಳಲ್ಲಿ ನಾಲ್ಕನೆಯವರು. ತಮ್ಮ ಅಸಾಧಾರಣ ವ್ಯಕ್ತಿತ್ವದಿಂದ ಅನೇಕ ಮಹಾನುಭಾವರನ್ನು ಅಂದು ತಮ್ಮೆಡೆಗೆ ಆಕರ್ಷಿಸಿದ ಪ್ರಸಿದ್ದ ಗುರುಗಳು.ಇವರ ಘನ ವ್ಯಕ್ತಿತ್ವಕ್ಕೆ ಆಕರ್ಷಿತವಾಗಿ ಬಂದವರಲ್ಲಿ ಪ್ರಮುಖರೆನಿಸಿದ ಶ್ರೀಮಲೆಯ ಮಾದೇಶ್ವರರು ಸುತ್ತೂರುಶ್ರೀಮಠದಲ್ಲಿ ಕೆಲವು ದಿನಗಳಿದ್ದು,ಕಾಯಕದ ಹಿರಿಮೆಯ ಅದ್ಭುತ ದರ್ಶನವನ್ನು ನೀಡಿ ಮುಂದೆ ಬಿಜಯ ಮಾಡಿದರೆಂದು "ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ". "ಶಿವರಾತ್ರಿ ಶಿವಾಚಾರ್ಯ" ಮೊದಲಾದ ಕೃತಿಗಳಿಂದ ತಿಳಿದುಬರುತ್ತದೆ.

ಶಿವಾನುಭವಶಾಸ್ತ್ರದಲ್ಲಿ ಬಲ್ಲಿದರೆನಿಸಿದ್ದ ಶ್ರೀಸಿದ್ದನಂಜದೇಶಿಕೇಂದ್ರರು ತಮ್ಮ ಪ್ರೌಢಕೃತಿ ಪರಮಶಿವಾದಿಕ್ಯ ಶಿಖಾಮಣಿಯನ್ನು ರಚಿಸಿದ್ದಾರೆ. ಇದರಲ್ಲಿ ವೇದವೇಧಾಂತಾಗಮ ಪುರಾಣೇತಿಹಾಸಾದಿಗಳ ವಿಪುಲ ಆಧಾರಗಳ ಮೇಲೆ ಶಿವಾಧಿಕ್ಯವನ್ನು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿ ಶಿವಧರ್ಮದ ಬಗ್ಗೆ ಉತ್ಕಟಾಭಿಮಾನವನ್ನುಕ್ಕಿಸಿ, ಶಿವಭಕ್ತಿಯನ್ನು ಚಿಮ್ಮಿಸುವ ಸತ್ಕೃತಿಯನ್ನುಕೊಟ್ಟ ಹಿರಿಮೆ ಶ್ರೀಸಿದ್ಧನಂಜದೇಶಿಕೇಂದರರಿಗೆ ಸಲ್ಲುತ್ತದೆ ಎನ್ನಬಹುದು. ಕರ್ನಾಟಕ ಕವಿಚರಿತ್ರೆಕಾರರು "ಕವಿಚರಿತ್ರೆ ಮೂರನೆಯ ಸಂಪುಟದ" ಅನುಬಂಧಲ್ಲಿ ಸಿದ್ಧನಂಜದೇಶಿಕೇಂದ್ರರ ಈ ಕೃತಿಯನ್ನು ಹೆಸರಿಸಿ "ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿಯೂ ಉಕ್ತವಾಗದೆ ಇರುವ ಗ್ರಂಥಗಳನ್ನು ನಮಗೆ ತಿಳಿದ ಮಟ್ಟಿಗೆ ಈ ಅನುಬಂಧದಲ್ಲಿ ಕೊಟ್ಟಿದ್ದೇವೆ ಎಂದಿರುವರು."

**ಕಪಿನೀ ನಂಜುಂಡದೇಶಿಕೇಂದ್ರರು– ಕ್ರಿ.ಶ.ಸು. ೧೨೪೦ – ೧೩೧೦**

ಸುತ್ತೂರುವೀರಸಿಂಹಾಸನದ ಜಗದ್ಗುರುಪರಂಪರೆಯಲ್ಲಿ ಐದನೇಯವರಾದ ಶ್ರೀನಂಜುಂಡದೇಶಿಕೇಂದ್ರರ ಹೆಸರು ಉಜ್ವಲವಾದದು. ಅವರು ಕರ್ನಾಟಕ ಸಾಹಿತ್ಯ–ಸಂಸ್ಕೃತಿಗಳ ಪೋಷಕರಾಗಿ ಅನೇಕ ಕವಿಗಳಿಗೆ ಆಶ್ರಯ ನೀಡಿದ್ದರು. ಅದಕ್ಕೆ ಅವರ ಆಶ್ರಯದಲ್ಲಿ ರಚಿವಾದ ಕೃತಿ ರತ್ನಗಳೇ ಸಾಕ್ಷಿಯಾಗಿವೆ. ಅವರ ಸಾನಿಧ್ಯದಲ್ಲಿ ಹಲವು ಮಂದಿ ಕವಿ–ಅನುಭಾವಿಗಳು ತಮ್ಮ ದಿವ್ಯಾನುಭವಗಳನ್ನು ಕೃತಿಗಳಲ್ಲಿ ಪಡಿಮೂಡಿಸಿದರು. ಅವರು ಕೊಟ್ಟ ಸ್ಪೂರ್ತಿಯಿಂದ ಕನ್ನಡಕ್ಕೆ ದೊರಕಿದ ಒಂದು ಶ್ರೇಷ್ಠ ಕೃತಿಯೆಂದರೆ ಅಮುಗಿದೇವಯ್ಯಗಳ ಸಾಂಗತ್ಯ.

ಕಂತುಹರ ಸಮರೂಪನಂ ನಿಶ್ಚಿತನಂ ಗುಣವಣತನಂ ಸಲೆ ಚಿಂತಿತಾರ್ಥಪ್ರದನ ಕಪಿನೀ ನಂಜಗುರುವರನ ಶಿಷ್ಯಪರಂಪರೆಗೆ ಸೇರಿದ ಶಿವಲಿಂಗಕವಿ ಅಮುಗಿದೇವಯ್ಯಗಳ ಸಾಂಗತ್ಯದ ಕರ್ತೃ ಈತನ ಪೂರ್ಣ ಹೆಸರು ಶಿವಲಿಂಗಾರಾಧ್ಯನೆಂದೂ ಕಾವ್ಯನಾಮ ಶಿವಾನಂದ ಎಂದೂ ಆ ಗ್ರಂಥದಿಂದಲೇ ತಿಳಿದು ಬರುತ್ತದೆ.

"ಆವ ಸಂತಾನರೆಂದಲಿ ಕಾವ್ಯಸಂತಾನ
ಹಿರಿದೆಂದು ನಂಬಿದ ಶಿವಲಿಂಗ ಕವಿಯು
ಸದಮಲಾನಂದ ಸದ್ಗುರು ನಂಜೇಶ್ವರ
ವದಗೆನ್ನ ಹೃದಯಜಿಹ್ವೆಯಲಿ"[೮]

ಎಂದು ತನ್ನ ಗುರುಗಳಾದ ಸುತ್ತೂರು ಸಿಂಹಾಸನಾಧೀಶ್ವರ ಕಪಿನ ನಂಜುಂಡೇಶ್ವರರನ್ನು ಹೃದಯ ಜಿಹ್ವೆಗೆ ಆಹ್ವಾನಿಸಿ ಅವಿರಳಾತ್ಮಕ ಭಕ್ತಕೃತಿಯನ್ನು ಹೇಳಲು ಹೊರಟಿದ್ದಾನೆ.

"ಸುತ್ತೂರು ಸಿಂಹಾಸನಾಧೀಶ ಕಪ್ಪಿನ
ಮುಕ್ತಿದಾಯಕ ನಂಜೇಶ್ವರನ
ಹಸ್ತದಿ ಜನಿಸಿದ ಭೃತ್ಯ ಶಿವಾನಂದ
ವಿಸ್ತರಿಸಿದ ನಿಜಕಥೆಯಲಿ"[೯]

---

೮. ಅಮುಗಿದೇವಯ್ಯಗಳ ಸಾಂಗತ್ಯ (೧–೨೯) ಸಂ.ಡಾ.ಎಚ್.ತಿಪ್ಪೆರುದ್ರಸ್ವಾಮಿ
೯. – ಅದೇ – ಸಂಗಾತ್ಯ (೧–೧೩

ಈ ಆಧಾರಗಳಿಂದ ಶ್ರೀ ಕಪ್ಪಿನ ನಂಜುಂಡದೇಶಿಕೇಂದ್ರರು ಕವಿಜನರಿಗೆ ಸ್ಫೂರ್ತಿಯಾಗಿ ಕಲ್ಯಾಣದ ಶಿವಶರಣನೂ ವಚನಕಾರನೂ ಆದ ಅಮುಗಿದೇವಯ್ಯಗಳ ವಿವರಣಾತ್ಮಕ ಲಿಂಗ ಜೀವನದ ಒಂದು ಶ್ರೇಷ್ಠ ಕೃತಿಯಾಗಿ ಸಾಂಗತ್ಯದಲ್ಲಿ ಮೂಡಿಬಂದುದಕ್ಕೆ ಕಾರಣರಾದರು ಎಂಬುದನ್ನು ನೆನೆದಾಗ ಗುರುಗಳವಾರ ಸಾಹಿತ್ಯ ಸೇವೆ ಪೋಷಣೆಗಳು ಚಿರಸ್ಮರಣೀಯವೆಂದು ಮತ್ತೆ ಹೇಳಬೇಕಾಗಿಲ್ಲ. ಘನ ವಿದ್ವಾಂಸರಾಗಿದ್ದ ಅವರು ಕೃತಿರಚನೆ'ರಗೈದಿರಲೂಬಹುದು. ಆದರೆ ಅವುಗಳಾವುವೂ ಇದುವರೆಗೆ ಉಪಲಬ್ದವಿಲ್ಲ.

ಇಂದಿನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು. ಅಮುಗಿದೇವಯ್ಯಗಳಸಾಂಗತ್ಯವನ್ನು ಪ್ರಸಿದ್ಧವಿದ್ಯಾಂಸರಾದ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರಿಂದ ಸಂಪಾದಿಸಿ ತಮ್ಮ ಗ್ರಂಥಮಾಲೆಯಿಂದ ಪ್ರಕಟಪಡಿಸಿ ಬೆಳಕಿಗೆ ತಂದ ಮಹೋಪಕಾರವನ್ನು ಇದೇ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.

**ಘನಲಿಂಗದೇವರು–ಕ್ರಿ.ಶ.ಸು. ೧೫೩೦–೧೫೫೦**

ಕನ್ನಡ ಸಾಹಿತ್ಯಕ್ಕೆ ಸುತ್ತೂರು ಜಗದ್ಗುರು ಪರಂಪರೆಯವರು ಸಲ್ಲಿಸಿದ ಸೇವೆಯಲ್ಲಿ ಮೊದಲನೆಯ ಸ್ಥಾನದಲ್ಲಿ ನಿಲ್ಲತಕ್ಕವೆಂದರೆ ಘನಲಿಂಗಿಗಳು. ಸಾಹಿತ್ಯ ಚರಿತ್ರೆಯಲ್ಲಿ ಸುತ್ತೂರುಮಠದ ಕೀರ್ತಿಸ್ಥಿರವಾಗಿ ನಿಲ್ಲುವಂತೆ ಸತ್ವಪೂರ್ಣ ಸಾಹಿತ್ಯವನ್ನು ಕೊಟ್ಟವರು. ಪರಮಷಟ್ಸಲಮಾರ್ಗದಲ್ಲಿ ನೆರೆದಿರುತ ಸುರುಚಿರದ ಸುತ್ತೂರುಸಿಂಹಾಸನದಿರಾರಾಜಿಸಿದ ಹನ್ನೊಂದನೆಯ ಜಗದ್ಗುರು ಶ್ರೀಘನಲಿಂಗದೇವರು ಮಹಾಮಹಿಮರಾದ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗಯತಿಗಳ ಕಾರುಣ್ಯದ ಶಿಶುವಾಗಿ ಸಿದ್ಧಲಿಂಗಯುಗದ ಪ್ರಸಿದ್ಧ ವಚನಕಾರರಾಗಿ ವಚನಸಾಹಿತ್ಯ ಭಂಡಾರಕ್ಕೆ ಗಣನೀಯ ಕಾಣಿಕೆಯನ್ನಿತ್ತ ಘನಲಿಂಗಿಗಳು ಚಿರಸ್ಮರಣಿಯರಾಗಿದ್ದಾರೆ.

ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಹದಿನೈದು ಹದಿನಾರನೆಯ ಶತಮಾನಗಳು ವಚನಸಾಹಿತ್ಯದ ದೃಷ್ಟಿಯಿಂದ ತುಂಬ ಗಮನಾರ್ಹವಾದವುಗಳು. ಹನ್ನೆರಡನೆಯ ಶತಮಾನದಲ್ಲಿ ಪೂರ್ಣ ಪ್ರವಾಹವಾಗಿ ಹರಿದುಬಂದ ವಚನವಾಙ್ಮಯವು ಕಲ್ಯಾಣದ ಕ್ರಾಂತಿಯ ತರುವಾಯ ಇದ್ದಕ್ಕಿದ್ದಂತೆ ಕಣ್ಮರೆಯಾದಂತಿದ್ದರೂ ಸಂಪೂರ್ಣ ಬತ್ತಿಹೋಗದೆ ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಗುಪ್ತಗಾಮಿಯಾಗಿದ್ದು ಮತ್ತೆ ಈಯುಗದಲ್ಲಿ ಪುಟ್ಟಿದೆದ್ದು ಹರಿದುದನ್ನು ಕಾಣಬಹುದು. ಈ ಶತಮಾನಗಳಲ್ಲಿ ವೀರಶೈವ ಧಾರ್ಮಿಕ, ಸಾಹಿತ್ಯಕ ಚಟುವಟಿಕೆಗಳು ಬಹಳ ವೇಗವಾಗಿ ನಡೆದವು ಹಳೆಯ ವಚನಗಳ ಸಂರಕ್ಷಣೆ ಸಕಲ ಸಂಪಾದನೆಗಳೂ ಅವುಗಳಿಗೆ ಟೀಕೆ ಟಿಪ್ಪಣಿ

ವ್ಯಾಖ್ಯಾನಗಳನ್ನು ಬರೆಯುವ ಹಾಗೂ ಧರ್ಮಪ್ರಚಾರ ಮಾಡುವ ಬೃಹತ್‌ಕಾರ್ಯಗಳೂ ಅಗಾದವಾಗಿ ನಡೆದವು. ಈ ಕಾರ್ಯಗಳ ಜೊತೆಜೊತೆಯಲ್ಲಿಯೆ ಸ್ವತಂತ್ರವಾಗಿ ವಚನಗಳನ್ನು ರಚಿಸಿ ವಚನಸಾಹಿತ್ಯದ ವಿಶಿಷ್ಠ ಪರಂಪರೆಯನ್ನು ಮುಂದುವರೆಸುವ ಸೃಜನಶೀಲ ಮಹತ್ಕಾರ್ಯಗಳೂ ನಡೆದವು. ಈ ಕಾಲದ ಉತ್ತಮ ವಚನಕಾರರಲ್ಲಿ ತೋಂಟದ ಸಿದ್ಧಲಿಂಗೇಶ್ವರರನ್ನು ಬಿಟ್ಟರೆ, ಎದ್ದುಕಾಣುವ ಎರಡನೇಯ ಹೆಸರೇ ಘನಲಿಂಗಿಗಳದು.

ಘನಲಿಂಗದೇವರು ತೋಂಟದ ಸಿದ್ಧಲಿಂಗರ ಅಚ್ಚು ಮೆಚ್ಚಿನ ಶಿಷ್ಯರು ಸುತ್ತೂರು ಸಿಂಹಾಸನ ತಮ್ಮ ಗುರುಪರಂಪರೆಯನ್ನೂ ತಮಗೆ ತೋಂಟದಸಿದ್ಧಲಿಂಗರು ಘನಲಿಂಗಿಯೆಂಬ ಹೆಸರನ್ನು ಕೊಟ್ಟು ಅಕ್ಕರೆಯಿಂದ ರಕ್ಷಿಸಿದುದನ್ನೂ ತುಬು ಹೃದಯದಿಂದ ಹೇಳಿಕೊಂಡಿದ್ದಾರೆ.

ಎಲೆ ತಂಗಿ
ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಂಗರುದೋರುತ್ತಿದೆ
ನಿನ್ನ ಪೂರ್ವಾಪರವಾವುದಮ್ಮ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯ ದೇವರು
ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು
ಕೂಗಲೂರು ನಂಜಯ್ಯದೇವರು
ಆ ನಂಜಯ್ಯದೇವರ ಕರಕಮಲದಲ್ಲಿ
ಉದಯವಾದ ಶರಣವೆಣ್ಣಯ್ಯ ನಾನು
ಎನ್ನಗುರುವಿನಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು
ಆ ತೋಂಟದಾರ್ಯನು ತನ್ನ ಕೃಪೆಯೆಂಬ
ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಸ್ವರೂಪತತ್ವಾರ್ಥವೆಂಬ
ಹಾಲುತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
ಘನಲಿಂಗಿ ಯೆಂಬ ನಾಮಕರಣಮಂಕೊಟ್ಟು
ಪ್ರಾಯಸಮರ್ಥೆಯಂ ಮಾಡಿ
ಸತ್ಯ–ಸದಾಚಾರಿ–ಜ್ಞಾನ ಕ್ರೀಡೆಗಳೆಂಬ ದಿವ್ಯಾಭರಣಂಗಳು ತೊಡಿಸಿ

ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಅರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಗೆ ಮಾತನಿಕ್ಕಿವರಮ್ಮಾ

ಘನಲಿಂಗಿಗಳು ತೋಂಟದಸಿದ್ಧಲಿಂಗರ ಶಿಷ್ಯಸಮೂಹದಲ್ಲಿ ಇದ್ದುದಾಗಿ ವಿರಕ್ತ ತೋಂಟದಾರ್ಯರು (ಕ್ರಿ.ಶ ೧೫೬೦)ಬರೆದಿರುವ ಸಿದ್ಧೇಶ್ವರಪುರಾಣದಿಂದಲೂ ತಿಳಿದುಬರುತ್ತದೆ. ತೋಂಟದ ಸಿದ್ಧಲಿಂಗರನ್ನು ತುಮಕೂರಿನಲ್ಲಿ ಪಲ್ಲಕ್ಕಿಯ ಮೇಲೆ ಮೆರವಣಿಗೆಮಾಡುತಿದ್ದಾಗ' ಅವರ ಶಿಷ್ಯಾರನ್ನು ಕಂಡ ಪುರಾಂಗನೆಯರ ವರ್ಣನೆಯಲ್ಲಿ ಉಕ್ತವಾಗಿರುವ ಮಠಾಧೀಶ್ವರರುಗಳಲ್ಲಿ ಘನಲಿಂಗದೇವರೂ ಒಬ್ಬರೆಂದು ಹೇಳಿದೆ.

ಉರೆ ಕೃಷ್ಣಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂಗೆಯ್ದು ಕೆತಳದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಶ್ಚಳವಿರತನೀತನಾರೆ
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನಮಾರ್ಗದೊಳು ನಿಂದು ಗುಣ
ಕರಿಗೊಂಡ ಘನಲಿಂಗದೇವನೇ ಕಾಣೆ ಶುಕವಾಣಿ ಕಾಳಾಹಿವೇಣಿ॥

ಅವರ ವೇಷಭೂಷಣ ಸ್ವಭಾವದ ಸುಂದರ ವಿವರಗಳೊಂದಿಗೆ ಬಂದಿರುವ ಈ ವಿವರಣೆಯು ಘನತೆವೆತ್ತ ಘನಲಿಂಗಿಗಳ ಉತ್ತುಂಗ ವ್ಯಕ್ತಿತ್ವವನ್ನು ಬೆಳಗುವ ಹೆದ್ದೀವಿಗೆಯಾಗಿದೆ.

"ಘನಲಿಂಗದೇವರ ವಚನಗಳ ಅಂಕಿತ "ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ" ಇವರ ಅರವತ್ತ ಮೂರು ವಚನಗಳು ಅಂದಿನ ಯುಗದವರ ವಚನಗಳಂತೆ ಸುದೀರ್ಘವೂ, ಸೈದ್ಧಾಂತಿಕವೂ ಆಗಿದ್ದು ಭಾವತೀವ್ರತೆಯ ಸುಂದರ ನಿರೂಪಣೆ, ಸರಳ ಭಾಷಾಶೈಲಿಗಳಿಂದ ಉತ್ತಮ ರಚನೆಗಳಾಗಿವೆ ಅವುಗಳಲ್ಲಿ ಸಾಧಕನ ಆರ್ತತೆಯಿದೆ ನಿಷ್ಠೆಯಿದೆ ಭಕ್ತಿಯಿದೆ."[೧೦]

---

೧೦. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ – ಪುಟ –೫೪೦

ಘನಲಿಂಗಿಗಳನ್ನು ವಚನಕಾರರಲ್ಲಿ ಉರಿಲಿಂಗದೇವ ಗಜೇಶಮಸಣಯ್ಯಗಳಂತೆ ಶರಣಸತಿ-ಲಿಂಗಪತಿ ಮಾರ್ಗಕ್ಕೆ ಸೇರಿಸಬಹುದು. ಈ ಭಾವ ಮಹಾದೇವಿ ಅಕ್ಕಗಳ ವಚನಗಳಲ್ಲಿ ಅದೆಷ್ಟು ಸಹಜ ಸುಂದರವಾಗಿ ಬಂದಿದೆಯೋ, ಅಷ್ಟೇ ಚೆನ್ನಾಗಿ ಘನಲಿಂಗಿದೇವರ ವಚನಗಳಲ್ಲಿಯೂ ಬಂದಿರುವುದನ್ನು ಕಾಣಬಹುದು. ಈ ಶರಣವೆಣ್ಣು ಒಲಿದಿರುವ ಪ್ರಿಯನಿಗೆ ಒಂದು ವಿಶೇಷಣವೂ ಇದೆ ಅದೆಂದರೆ ಆ ಚಿನ್ನಮಲ್ಲಿಕಾರ್ಜುನನು ಘನಲಿಂಗಿಯ ಮೋಹದವನು ಅವನೊಡನೆ ಘಟಿಸಿದ ಈ ಪ್ರೇಮಸಂಬಂಧ ಹರೆಯದ ಹುಚ್ಚಿನಲ್ಲಿ ಸಂಭವಿಸಬಹುದಾದಂಥ ಆಕಸ್ಮಿಕ ಘಟನೆಯೇನೂ ಅಲ್ಲ. ಈ ಜೀವನಕ್ಕೆ ತಾನು ತನ್ನ ಪತಿ ಆ ದೇವ ಎಂಬ ಜ್ಞಾನ ಅಂಕುರಿಸಿದ್ದು ತಾರುಣ್ಯದಲ್ಲಿಲ್ಲ, ಶೈಶವದಲ್ಲೂ ಅಲ್ಲ ,ಅದಕ್ಕೂ ಹಿಂದೆ ಜೀವವೂ ತಾಯಿಯ ಗರ್ಭದಲ್ಲಿ ಇದ್ದಾಗಲೇ

> ಈ ಜನ್ಮದಲ್ಲಿ ಪಿಂಡೋತ್ಪತ್ತಿಯಲ್ಲಿಯೇ
> ಶರಣಸತಿ ಲಿಂಗಪತಿಯೆಂಬ ಜ್ಞಾನ ತಲೆದೋರಿ
> ಶರಣವೆಣ್ಣಾಗಿ ಹುಟ್ಟಿದೆನಯ್ಯ

ಜವ್ವನ ಕುಡಿವರಿದು ಗಂಡು ಹೆಣ್ಣಾಗಿ ಈ ಶರಣವೆಣ್ಣು ಚೆನ್ನಮಲ್ಲಿಕಾರ್ಜುನ್ನು ಮದುವೆಯಾಯಿತು. ಆತನನ್ನು ಕೂಡುವ ಕಾತರ ಈ ಹೆಣ್ಣಿಗೆ ಹೇಳಲಸದಳ

> ಪುಷ್ಪಪರಿಮಳದಂತೆ ನಾ ನೀನುಭಯವಿಲ್ಲದಂತೆ
> ಕೂಡೆನ್ನ ಪ್ರಾಣೇಶನೇ
> ಕೂಡದಿದ್ದರೆ ಗಲ್ಲವ ಪಿಡಿ
> ಪಿಡಿಯದಿದ್ದರೆ ಬೊಟ್ಟಾಡು
> ಬೊಟ್ಟಾಡದಿದ್ದರೆ ಅಲಿಂಗಿಸು
> ಆಲಿಂಗಿಸದಿದ್ದರೆ ಮಾತಾಡು
> ಮಾತಾಡದಿದ್ದರೆ ನೋಡು ನೋಡದಿದ್ದರೆ ಬಾ
> ಬಾರದಿದ್ದರೆ ಪ್ರಮಥಗಣಂಗಳೊಡನೆ ನನ್ನವಳೆಂದು ನುಡಿ
> ನುಡಿಯದಿದ್ದರೆ, ನಿನ್ನ ಮನದಲ್ಲಿ ನನ್ನವಳೆಂದು ಭಾವಿಸು
> ಭಾವಿಸದಿದ್ದರೆ ಪುಣ್ಯ ಕಣ್ಣೆರೆಯದು

ಬಡಪಟ್ಟಿಗೆ ಒಲಿಯದ ಪ್ರಿಯನನ್ನು ಪರಿಪರಿಯಾಗಿ ಪ್ರಾರ್ಥಿಸಿ ಅಂಗಲಾಚುವ ಮುಗ್ಧ ಹೆಣ್ಣಿನ ದೈನ್ಯತೆಯ ಚಿತ್ರ ಅಪೂರ್ವವಾಗಿದೆ. ಶರಣಸತಿ ಲಿಂಗಪತಿಯೆಂದು ಬಣ್ಣಿಸಿ ಒಪ್ಪವಿಟ್ಟು ನುಡಿದುಕೊಂಬ ಕುಟಿಲವೆಣ್ಣಲವಯ್ಯ ನಾನು ನಿನಗೆ ಕೈಕಾಲಿಲ್ಲದ ಮೋಟಂಗೆ ಮೆಚ್ಚಿ ಮರುಳಾದ

ಪತಿವ್ರತೆ. ಎನ್ನ ಪ್ರಾಣಷಟ್‌ಸ್ಥಲಕ್ಕೆ ನೆಲೆಸಂದ ಅಕ್ಕಮಹಾದೇವಿಯರು ಹೋದ ಬಟ್ಟೆಯಲ್ಲಿ ನಡೆಯುವುದಲ್ಲದೆ ಕಿರುಬಟ್ಟೆಯಲ್ಲಿ ನಡೆಯದು ಎನ್ನ ಗಂಡ ಆಳಲಿ, ಅಳದೆ ಹೋಗಲಿ ಪತಿಭಕ್ತಿಯ ಬಿಡೆ ಕಣಾ. ಇಂತಹ ಮಾತುಗಳಲ್ಲಿ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನನ್ನು ಒಲಿಸಿಕೊಳ್ಳುವ ಬಗೆ ಹೃದಯಂಗಮವಾಗಿ ಬಂದಿವೆ.

ಘನಲಿಂಗಿಗಳು ಬೂಟಾಟಿಕೆಯ ವಿರಕ್ತರ ಬಗ್ಗೆ ಬಹಳ ಕಟುವಾಗಿ ನುಡಿದಿದ್ದಾರೆ. ವಿರಕ್ತವರ್ಗವು ತನ್ನ ಆದರ್ಶವನ್ನು ತೊರೆದು ಕಾಯಕಕ್ಕಾರದೆ ಜೀವಗಳ್ಳರಾಗಿ ಮಂಡೆಯ ಬೋಳಿಸಿಕೊಂಡು ಕಂಡಕಂಡವರ ಮನೆಯಲ್ಲಿ ಉಂಡು ಓಡಾಡುವುದನ್ನು ಕಂಡಾಗ ಅವರ ವಾಣಿ ಸಿಡಿಲಿನೇಟಾಗುತ್ತದೆ. ವಿರಕ್ತನು ಯಾರು? ಎಂಬ ಪ್ರಶ್ನೆಗೆ ಅವರು ಕೊಡುವ ಉತ್ತರ– “ಸುಚಿತ್ತ ಗುರುವನಪ್ಪಿ ಸುಬುದ್ಧಿಲಿಂಗವನಪ್ಪಿ, ನಿರಹಂಕಾರ ಜಂಗವನಪ್ಪಿ ಸುಮನ ಪ್ರಸಾದವನಪ್ಪಿ ಸುಜ್ಞಾನ ಪಾದೋದಕವನಪ್ಪಿವ ಲಿಂಗಾಂಗಿ ಅಂತಲ್ಲದೆ ಹಗಲಾದರೆ ಹಸಿವು ತೃಷೆಗೆ ಹಂಬಲಿಸಿ ಬಾಯಿಬಿಟ್ಟು ಇರುಳಾದರೆ ವಿಷಯಾತುರನಾಗಿ ಕಳವಳಿಸಿ ಕನಸಕಂಡು ಮನವೆಂತಾಡುದಂತಾಡುವರೆಲ್ಲಾ ನಿಜ ವಿರಕ್ತರಪ್ಪರೆ?” ಹಸಿವು ತೃಷೆ ವಿಷಯ ವ್ಯಾಪಾರಗಳೂ ಸುಟ್ಟರುಹಿದ ತೋಂಟದ ಸಿದ್ಧಲಿಂಗ, ಅಲ್ಲಮಪ್ರಭು, ಅನಿಮಿಷ ದೇವರು ಇಂತಿವರು ವಿರಕ್ತರಲ್ಲದೆ, ಮತ್ತೆ ವಿರಕ್ತರೆಂಬ ನುಡಿ ನಿಮ್ಮ ಹಡಪದಲ್ಲಿರಲಿ – ಎಂದು ಕಡ್ಡಿ ಮುರಿದಂತೆ ಎಚ್ಚರಿಸಿದ್ದಾರೆ.

ಮಾಯೆಯ ಅದಮ್ಯಶಕ್ತಿ ಅಸಾಧ್ಯದಾಂಧಲೆಗಳನ್ನು ಕುರಿತು ಎಲ್ಲರೂ ಹೇಳಿದ್ದಾರೆ ಆದರೆ ಘನಲಿಂಗ ದೇವರು ಹೇಳಿರುವುದರಲ್ಲಿ ತುಂಬಾ ಸೊಗಸಿದೆ ಸಂಸಾರವನ್ನು ಬಿಟ್ಟವರಿಗೂ ಸಂಸಾರ ಬಿಡುವುದಿಲ್ಲ. ಅದರ ಹಾವಳಿಯಿಂದ ತಪ್ಪಿಕೊಂಡವರಿಲ್ಲ .ಬಹಳ ಕಷ್ಟ ಇದೋ ನೋಡಿ

ಕರಣಹಸುಗೆಯ ನೋಡುವಣ್ಣಗಳ
ಕಾಲ ಹಿಡಿದೆಳೆಯಿತು ಮಾಯೆ
ಮಿಶ್ರಾರ್ಪಣಗಳ ನೋಡುವಣ್ಣಗಳ
ಮಿರಸೆಯ ಹಿಡಿದುಯ್ಯಲೆಯನಾಡಿತು ಮಾಯೆ
-----------------------------
ಬರಿಯ ವೈರಾಗ್ಯವ ಮಾಡುವಣ್ಣಗಳ
ಸ್ತ್ರೀಯರ ಮುಡಿಯ ಸಿಂಗರಿಸುವಂತೆ ಮಾಡಿತು ಮಾಯೆ

ಹೀಗೆಯೇ ಮುಂದುವರಿಯುತ್ತಾ ಮಾಯೆಯ ಹಾವಳಿಯನ್ನು ಮನೋಹರವಾಗಿ ಉಗ್ಘಡಿಸುತ್ತದೆ ಈವಚನ. ಘನಲಿಂಗಿಗಳ ಮಾತುಗಳಲ್ಲಿ ಆತ್ಮವಿಮರ್ಶೆ ಭಕ್ತಿ, ಶ್ರದ್ಧೆ, ವಿನಯಾದಿಗಳು ವಿಶಿಷ್ಟವಾಗಿ ಎದ್ದುಕಾಣುತ್ತವೆ.

ಕಪಿ ಕಳ್ಳಕುಡಿದು, ಕಡಲದಾಂಟುವೆನೆಂದು
ಲಂಘಿಸಿ, ನಡುನೀರಿನಲ್ಲಿ ಬಿದ್ದು
ಮಿಂನಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನಬಾಳು

ಪರಮಾತ್ಮನ ನೆನಹಿಲ್ಲದೆ ಪ್ರಪಂಚದಲ್ಲಿಯೇ ಮುಳುಗಿದ ಜೀವ ನೊಂದು ಬೆಂದು ಮೊರೆಯಿಡುವ ದೀನಸ್ಥಿತಿಯನ್ನು ಈ ಮಾತುಗಳಲ್ಲಿ ತೋಡಿಕೊಂಡಿದ್ದಾರೆ.

ಕುನ್ನಿಗೆ ರನ್ನದ' ಹಲ್ಲಣವ ಹಾಕಿದಂತೆ
ಹಂದಿಯ ತಂದು ಅಂದಣವನೇರಿಸಿದಂತೆ
ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ
ಗುರುವೆ
ಎಂದು ಪ್ರಾರಂಭವಾಗುವ ವಚನ ಅವರ ವಿನಯಶ್ರೀಯನ್ನು ಸಾರುತ್ತದೆ
ನಾನು ಮುಂದುನರಿಯದ ಅಂಧಕನಯ್ಯ
ನಿನ್ನ ಬಾಗಿಲ ಕಾವ ಗೊಲ್ಲನಯ್ಯ
ನಿನ್ನ ಕುದುರೆಯ ಸಾಕುವ ಗೋವನಯ್ಯ
ನಿನ್ನ ಚಮ್ಮಾವುಗೆಯ ಹೊತ್ತು ಬರುವ ಬೋವರಲೆಂಕನಯ್ಯ
ನೀನುಗುಳ್ದ ತಂಬುಲವ ಮೆಲುವ  ನಿನ್ನನಾದಿಯ ಹಳೆಯನಯ್ಯ
ನಿನ್ನಂಗಳದಲ್ಲಿ ಬೊಗುಳುವ ಶ್ವಾನನಯ್ಯ
ಎನ್ನ ತಪ್ಪ ಕಾಯಯ್ಯ, ಶಿವಧೋ ಶಿವಧೋ

ಹಾಗಯೇ ಇನ್ನೊಂದು ವಚನದಲ್ಲಿ ನನಗೆ ಹೊನ್ನು, ಹೆಣ್ಣು, ಮಣ್ಣು ಯಾವುದೂ ಬೇಡ, ಯಾವ ಫಲ ಪದವಿಗಳೂ ಬೇಡ ಶಿವಶರಣರ ಮನೆಯ ಬಾಗಿಲು ಕಾಯುವ  ಸೊಣಗನನ್ನಾಗಿ ಮಾಡು ಎಂದು ಕೇಳುವ ಚಿತ್ರ ಬರುತ್ತದೆ.

"ನಿಮ್ಮಾಣೆ ಎನಗೊಂದ ಕರುಣಿಸಯ್ಯ
ತಂದೆ ಡೋಹರಕಕ್ಕಯ್ಯ ಮಾದಾರಚೆನ್ನಯ್ಯ ಅಂಬಿಗರ

ಚೌಡಯ್ಯ ಇಂತಪ್ಪ ಶಿವಕುಮಾರ
ಮನೆಯ ಬಾಗಿಲ ಕಾವ ಶುನಕನ ಮಾಡಿ
ಎನ್ನ ನೀ ನಿಲಿಸಯ್ಯ"[೧೧]

ವಚನಸಾಹಿತ್ಯ ಪರಂಪರೆಗೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸಿದ ಘನಲಿಂಗಿಗಳ ಬಗೆಗೆ ಶ್ರೀಸಿದ್ಧಯ್ಯಪುರಾಣಿಕರು ಹೀಗೆಂದು ಹೇಳಿದ್ದಾರೆ: ಪರಮಗುರು ತೋಂಟದ ಸಿದ್ಧಲಿಂಗೇಶ್ವರರ ಕರುಣದ ಕಂದವಾಗಿ ಬೆಳೆದು ಶರಣಾಮಾರ್ಗದ ಮೈಲಿಗಲ್ಲಾಗಿ ಮೆರೆದ ಘನಲಿಂಗದೇವನು ವಚನ ವಾಙ್ಮಯದಲ್ಲಿಯೂ ಉಚ್ಚಸ್ಥಾನದಲ್ಲಿ ವಿರಾಜಿಸುತಿದ್ದಾನೆ "ಘನಲಿಂಗ ದೇವರ ವಚನಗಳನ್ನು ಸಂಸ್ಕರಿಸಿ ಸಂಪಾದಿಸಿ ಪ್ರಕಟಿಸಿರುವ ಪೂಜ್ಯ ಜಗದ್ಗುರು ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಗ್ರಂಥದ ಪೀಠಿಕಾಭಾಗದಲ್ಲಿ ಹೇಳಿರುವ ಮಾತುಗಳು ಒಟ್ಟಾರೆ ಘನಲಿಂಗಿಗಳ ವಚನಗಳನ್ನೆಲ್ಲ ತೂಗಿ ಬೆಲೆಕಟ್ಟಿವೆ ಎನ್ನಬಹುದು. ಅವರ ಹಲವು ವಚನಗಳು ಉತ್ತಮ ಭಾವಗೀತೆಗಳಾಗಿದ್ದು ಮಿಡಿದರೆಸಾಕು. ರಸವೊಸರುವ ರಸದಾಳಿ ಕಬ್ಬಿನ ಗಣೆಯಂತಿವೆ. ಅವುಗಳಲ್ಲಿ ವಿಡಂಬನೆಯಿದೆ, ಖಂಡನೆಯಿದೆ, ಧ್ಯಾನವಿದೆ, ಪ್ರಾರ್ಥನೆಯಿದೆ, ದಿವ್ಯದ ಹಂಬಲವಿದೆ, ಬೆಡಗೂಇದೆ ಘನಲಿಂಗದೇವರ ಅವೇಶವೆಲ್ಲ ವೆಚ್ಚವಾಗದೆ ಆತ್ಮಪರೀಕ್ಷೆಯಲ್ಲೂ ಅಂತರಂಗ ವೀಕ್ಷಣೆಯಲ್ಲೂ ವಿನಿಯೋಗವಾಗಿದೆ. ಅವರ ವಚನಗಳಲ್ಲಿನ ಉಳಿದ ಪಾಲು ಸುಧಾರಕರನ್ನು ಸುಧಾರಿಸುವ ಸಲುವಾಗಿ ಮೀಸಲಾಗಿದೆ."[೧೨]

**ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳವರು ಕ್ರಿ.ಶ ೧೫೫೦– ೧೫೮೯**

೧೧ದುರಿತನಿಚಯಧ್ವಾಂತ ಬಾಸ್ಕರ
ಪರಮಗಲಿ ಕುವಲಯ ಸುಧಾಕರ
ಸುರುಚಿರಾಮಳತನು ವಿಶಾರದ ಭಕ್ತಮಂದಾರ
ಶರಣಲೋಕ ಪ್ರೇಮಿ"[೧೩]

ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳು ಘನಲಿಂಗಿಗಳ ತರುವಾಯ ಸುತ್ತೂರುಪೀಠವನ್ನು ಅಲಂಕರಿಸಿದ ಹನ್ನೆರಡನೆಯ ಜಗದ್ಗುರುಗಳವರು. "ಇವರು ವೃಷಭೇಂದ್ರ ವಿಜಯಪುರಾಣ ಎಂಬ ಪ್ರೌಢಗ್ರಂಥವೊಂದನ್ನು ಬರೆದಿವಂತೆ ತಿಳಿಯುತ್ತದೆ. ಇದು ಬೆಳಕಿಗೆ ಬಂದಿಲ್ಲ. ಕರ್ನಾಟಕ

---------------

೧೧. ಶರಣಚರಿತಾಮೃತ – ಪುಟ – ೬೪೨
೧೨. ಘಲಿಂಗದೇವಾ ವಚನಗಳು – ಪೀಠಿಕೆ ಪುಟ– ೭
೧೩. ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ, ೧೨–೧೫

ಕವಿಚರಿತೆಯ ಮೂರುಸಂಪುಟಗಳಲ್ಲಿಯೂ ಉಕ್ತವಾಗದೆ ಇರುವ ಗ್ರಂಥಗಳನ್ನು ನಮಗೆ ತಿಳಿದಮಟ್ಟಿಗೆ ಈ ಅನುಬಂಧದಲ್ಲಿ ಕೊಟ್ಟಿದ್ದೇವೆ ಎಂದು ಹೇಳಿ ಕವಿಚರಿತ್ರೆಕಾರರು ಇದನ್ನು ಉಲ್ಲೇಖಿಸಿದ್ದಾರೆ."[೧೪]

**ಗುರು ಚನ್ನಬಸವ ಶಿವಾಚಾರ್ಯರು ಕ್ರಿ.ಶ.ಸು. ೧೬೪೦–೧೭೧೩**

ಸುತ್ತೂರು ಶ್ರೀ ವೀರಸಿಂಹಾಸನ ಜಗದ್ಗುರು ಪರಂಪರೆಯಲ್ಲಿ ಬಂದ ಹದಿನೈದನೆಯವರಾದ ಶ್ರೀಗುರುಚನ್ನಬಸವ ಶಿವಚಾರ್ಯರು ಘನ ವಿದ್ವಾಂಸರಾಗಿದ್ದು ಅನೇಕ ಮಂದಿ ಕವಿ ವಿದ್ವಾಂಸರಿಗೆ ಮನ್ನಣೆ ಆಶ್ರಯಗಳನ್ನು ನೀಡಿದ್ದರು. ಶ್ರೀಮಠದ ಪಂಡಿತ ಮಂಡಲಿಯಲ್ಲಿ ಪ್ರಮುಖರಾದವರು. "ಶ್ರೀಗಳವರ ಸಹಪಾಠಿಗಳೂ ಪ್ರಸಿದ್ಧ ಕವಿಗಳಾದ ಸೋಸಲೆ ರೇವಣಾಚಾರ್ಯ ಅಥವಾ ರೇವಣಾರಾಧ್ಯರು ಇವರು ರಚಿಸಿದ ಚೋಳರೇಣುಕ ಸಂವಾದಾತ್ಮಕವಾದ ಶಿವಾಧಿಕ್ಯ ಶಿಖಾಮಣಿ ಸಂಸ್ಕೃತ ಗ್ರಂಥವನ್ನು ನೋಡಿ ಮೆಚ್ಚಿಕೊಂಡ ಗುರುಗಳವರು ಮಠದ ಶಿಷ್ಯ ಮುದಿಗೆರೆರಘವಪ್ಪನಾಯಕನ ಪ್ರಾರ್ಥನೆಯಂತೆ ಅದಕ್ಕೆ ಕನ್ನಡದಲ್ಲಿ ಟೀಕೆಯನ್ನು ಬರೆಯಿಸಿದಂತೆ ತಿಳಿದುಬರುತ್ತದೆ. ಈ ಶಿವಾದಿಕ್ಯ ಶಿಖಾಮಣಿ ಟೀಕೆಯನ್ನು ಕಳಲೆ ಕಂಪನಂಚಾರ್ಯನ ನಮಸ್ಕಾರಪುರೀ ಸಿದ್ಧನಂಜಾರ್ಯ ಸುತ್ತೂರು ಸಿಂಹಾಸನದ ಗುರುನಂಜಾರ್ಯನ ಶಿಷ್ಯ ಚನ್ನಬಸವ ಈ ಮೂವರುಗಳ ಇಷ್ಟಾನುಸಾರವಾಗಿ ಬರೆದಂತೆ ರೇವಣಾರಾಧ್ಯರು ಹೇಳುತ್ತಾರೆ."[೧೫]

ಗುರುಚನ್ನಬಸವ ಶಿವಾಚಾರ್ಯರ ಸನ್ನಿಧಿಯಲ್ಲಿ ಸಮಾವೇಶಗೊಂಡಿದ್ದ ಪಂಡಿತ ಸಭೆಯಲ್ಲಿ ಕವಿಗಳಾದ ಸೋಸಲೆ ರೇವಣಾರಾಧ್ಯರು ಶಿವಾದಿಕ್ಯ ಶಿಖಾಮಣಿಯನ್ನು ಪಠಿಸಿದಾಗ ಮೊದಲಿನಿಂದಲಿ ತುದಿಯ ಪರಿಯಂತರವು ಮೆಚ್ಚಿದ ಗುರುಗಳಿವರು

"ಪರಮ ಕಾವ್ಯದಲಿಹ ರಹಸ್ಯವ
ನಿರದೆ ವಿವರಿಸುತರ್ಥವನು ನೀ
ಬರೆವುದೆಂದನಲು --------
ವರಕವಿಯು ತಾನೊಪ್ಪಿದನು ಗುರು
ವರನು ಸಮ್ಮಾನಿಸಿದನವನನು
ನೆರೆದ ಸಭೆಯಲಿ ಪಾರಿತೋಷಕ ವಸ್ತುಚಯದಿಂದ"[೧೬]

---

೧೪. ಕರ್ನಾಟಕ ಕವಿಚರಿತೆ – ಮೂರನೆ ಸಂಪುಟ ಅನುಬಂಧ ಪುಟ – ೪೩೦
೧೫. ಸುತ್ತೂರು ವೀರಸಿಂಹಾಸನ ಗುರುಪರಂಪರೆ ೧೫–೦೮
೧೬. ಕರ್ನಾಟಕ ಕವಿಚರಿತೆ ದ್ವಿತೀಯ ಸಂಪುಟ ಪು. ೬೩೦

## ಶಿವಮಂತ್ರ ದ್ರಷ್ಟಾರ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು – ೧೮೮೬ – ೧೯೬೮

ಜಗದ್ಗುರು ಶಿವಯೋಗಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಕಾರ್ಯಮಠದ ಕಾರಣಿಕ ಪುರುಷರಾದ ಶ್ರೀ ಪ್ರಭುಸ್ವಾಮಿಗಳವರಲ್ಲಿ ವೇದ, ಶಾಸ್ತ್ರ, ಪುರಾಣ, ಜ್ಯೋತಿಷ್ಯ ಮತ್ತು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಶೇಷ ಶಿಕ್ಷಣಪಡೆದು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಪಟ್ಟಾಧಿಕಾರವನ್ನು ವಹಿಸಿಕೊಂಡು ತಮ್ಮ ಕರ್ತವ್ಯದಕ್ಷತೆ–ಲಿಂಗ ಪೂಜಾ ತಪೋಘನತೆಯಿಂದ ಶ್ರೀಮಠವನ್ನು ಮುನ್ನಡೆಸಿ ಉತ್ತಮಸ್ಥಿತಿಗೆ ತಂದರು. ಸಾಹಿತ್ಯಪ್ರೇಮಿಗಳೂ ಆದ ಶ್ರೀಗಳವರು ಸಂಸ್ಕೃತ–ಕನ್ನಡ ಉಭಯ ಭಾಷೆಗಳಲ್ಲಿಯೂ ಹೆಚ್ಚಿನ ಪಾಂಡಿತ್ಯವನ್ನು ಗಳಿಸಿದ್ದರು. ಕವಿಗಳಿಗೆ ಕಲಾವಿದರಿಗೆ ವಿಶೇಷ ಪ್ರೋತ್ಸಹವನಿತ್ತರು. ಅಷ್ಟೇ ಅಲ್ಲದೆ ತಾವೇ ಸ್ವತಃ ಕೃತಿಕಾರರಾಗಿ ಕನ್ನಡ ವಾಙ್ಮಯಕ್ಕೆ ವಿಶಿಷ್ಟ ಕೊಡುಗೆಳನ್ನು ಕೊಟ್ಟಿದ್ದಾರೆ.

ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯಂದರೆ ಸುತ್ತೂರು ಶ್ರೀ ವೀರಸಿಂಹಾಸನದ ಸಮಗ್ರವಾದ ಪೂರ್ವೇತಿಹಾಸವು ಪ್ರ್ಥಮ ಬಾರಿಗೆ ಸಮಾಜಕ್ಕೆ ದೊರಕುವಂತೆ ಮಾಡಿದುದು. ಪೀಠದಲ್ಲಿ ಪ್ರಾಚೀನ ಶಿವಾಚಾರ್ಯರುಗಳು ತಮ್ಮ ಜೀವನ ಚರಿತ್ರಿಯನ್ನಾಗಲಿ ಶ್ರೀ ಮಠದ ಇತಿಹಾಸವನ್ನಾಗಲಿ ಬರೆದಿಡಲು ಹೋಗಿರಲಿಲ್ಲ. ಅವರುಗಳಿಗೆ ಅದರ ಅಗತ್ಯವು ಇರಲಿಲ್ಲವೆಂದು ಕಾಣುತ್ತದೆ. ಆದರೆ ಇಂದಿನ ಯುಗದಲ್ಲಿ ಯಾವುದೇ ಸಂಸ್ಥೆಗಾಗಲಿ ಅದರ ಚರಿತ್ರೆಗೆ, ಇತಿಹಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತದೆ. ಇದನ್ನು ಅರಿತ ಶ್ರೀಗಳವರು ತಮ್ಮ ಮಠದ ಇತಿಹಾಸದ ಶೋಧನೆಗೆ ಅವಿರತ ಪ್ರಯತ್ನ ನಡೆಸಿದರು. ಜೊತೆಗೆ ಹತ್ತಿರವಿದ್ದ ಕ್ಯಾತನಹಳ್ಳಿ ಸಾಹುಕಾರ್ ಶ್ರೀಸಿದ್ಧಲಿಂಗಯ್ಯನವರೇ ಮೊದಲಾದ ಹಿರಿಯಭಕ್ತರು ಪ್ರಮುಖಶಿಷ್ಯರು ಅದಕ್ಕಾಗಿ ಒತ್ತಾಯಪಡಿಸುತ್ತಲೂ ಇದ್ದರು. ಇದರಿಂದಾಗಿ ಶ್ರೀಗಳವರು ಪೀಠದ ಇತಿಹಾಸಕ್ಕೆ ಸಂಬಂಧಿಸಿದ ಚಾರಿತ್ರಿಕ ಸಾಧನ ಸಾಮಾಗ್ರಿಗಳನ್ನು ಪುರಾತನ ಶಿಲಾಶಾಸನಗಳನ್ನು ಪೀಠದ ಹಳೆಯ ಕಾಗದ ಪತ್ರಗಳನ್ನು ಎಲ್ಲ ಕಡೆಯಿಂದಲೂ ಸಂಗ್ರಹಿಸಿ ಒದಗಿಸಿಕೊಟ್ಟರು. ಶ್ರೀಗಳವರ ಕೃಪಾಶ್ರಯದಲ್ಲಿಯೇ ಇದ್ದ ಘನಪಂಡಿತರೂ ಶ್ರೇಷ್ಠ ಕವಿಗಳೂ ಆದ ಕುಂತೂರಿನ ಶ್ರೀ ಸಿ.ಸಂಗಪ್ಪಶಾಸ್ತ್ರಿಗಳವರಿಂದ ಶ್ರೀ ಸುತ್ತೂರುಸಿಂಹಾಸನದ ಗುರುಪರಂಪರೆ (೧೯೩೩) ಎಂಬ ಕಾವ್ಯ ಭಾಮಿನಿಷಟ್ಪದಿಯಲ್ಲಿ ಮೂಡಿಬಂದಿತು. ಕಾವ್ಯವನ್ನು ರಚಿಸಿದ ಬಗೆಗೆ ಕವಿಗಳಾದ ಸಂಗಪ್ಪಶಾಸ್ತ್ರಿಗಳು, ಶ್ರೀಗಳವರು ಮಠದಿಂದ ದಯಪಾಲಿಸಿದ ಶಾಸನ ಸನ್ನದುಗಳ ಆಧಾರಗಳಿಂದಲೂ ಈ ಪೀಠದ ಹಿಂದಿನ ಗುರುಗಳು ಬರೆದಿರತಕ್ಕ ಗ್ರಂಥಾಧಾರಗಳಿಂದಲೂ, ಸನ್ನದುಗಳ ಆಧಾಗಳಿಂದಲೂ ಮತ್ತು ಇವರು ಆಯಾ ಸ್ಥಳಗಳಲ್ಲಿ ಮಹಿಮೆಗಳನ್ನು ತೋರಿಸಿ

ಪ್ರಸಿದ್ಧವಾಗಿರುವ ಇತಿಹಾಸಗಳಿಂದಲೂ ಈ ಗ್ರಂಥವನ್ನು ಬರೆದಿರುತ್ತೇನೆ ಎಂಬುದಾಗಿ ಕವಿ ನಿವೇದನದಲ್ಲಿ ಹೇಳಿಕೊಂಡಿದ್ದಾರೆ. ಈ ಕೃತಿಯು ಮುಂದಿನ ಚರಿತ್ರಕಾರರಿಗೆ ಹೊಸದೊಂದು ಸ್ಫೂರ್ತಿಯನ್ನು ಕೊಟ್ಟಿತು. ಇದನ್ನೇ ಆಧರಿಸಿ ನಂತರ ದೊರೆಕಿದ ಇನ್ನೂ ಹೆಚ್ಚಿನ ದಾಖಲೆಗಳನ್ನು ಸೇರಿಸಿ ಸುತ್ತೂರು ಶ್ರೀ ವೀರಸಿಂಹಾಸನದ ಚರಿತ್ರೆಯನ್ನು ಶಿವರಾತ್ರಿ ಶಿವಚಾರ್ಯ ಎಂಬ ಗದ್ಯಕಾವ್ಯ (೧೯೬೧)ದಲ್ಲಿ ಸುಂದರವಾಗಿ ಆಸ್ಥಾನ ವಿದ್ವಾನ್ ಸಾಹಿತ್ಯರತ್ನ ಶ್ರೀಎಂ.ಬಿ.ನಂಜುಂಡಾರಾಧ್ಯರು ರಚಿಸಿದರು. ಶ್ರೀ ಮಠದಪ್ರಾಚೀನ ಇತಿಹಾಸವನ್ನು ಪರಿಚಯ ಮಾಡಿಕೊಡುವಲ್ಲಿ ಮೇಲೆ ಹೇಳಿ ಈ ಎರಡು ಕೃತಿಗಳು ಬಹು ಮುಖ್ಯವಾದವು. ಘನವಿದ್ವಾಂಸರೂ ಕವಿಗಳೂ ಆದ ಈರ್ವರು ಮಹನೀಯರುಗಳಿಂದ ಆದಿಜಗದ್ಗುರು ಶ್ರೀಶಿವರಾತ್ರೀಶ್ವರ ಮಹಾಸಂಸ್ಥಾನದ ಚರಿತ್ರೆಯನು ಬರೆಯಿಸಿ ಪ್ರಕಾಶಗೊಳಿಸಿದ ಮಹತ್ಕೀರ್ತಿ ಜಗದ್ಗುರು ಶ್ರೀಶಿವರಾತ್ರಿ ಮಹಾಸ್ವಾಮಿಗಳವರದಾಗಿದೆ.

ಶಿವಾನುಭವಸಾಹಿತ್ಯಕ್ಕೆ, ಕನ್ನಡದತತ್ವಭಂಡಾರಕ್ಕೆ ಶ್ರೀಗಳವರು ನೀಡಿರುವ ಕೊಡುಗೆ ಅತ್ಯಮೋಘವಾದುದು. "ಶಿವಮಂತ್ರಮಹಿಮೆ" ಎಂಬ ಮಹತ್ಕೃತಿಯನ್ನು ಕನ್ನಡದಲ್ಲಿ ರಚಿಸಿ ಮುಮುಕ್ಷುಗಳಿಗೆ ಮಾರ್ಗದರ್ಶನ ಮಾಡಿರುವುದು ತುಂಬಾ ಗಮನಾರ್ಹವಾದುದು. ಈ ಕೃತಿಯು ಮೂಡಿಬಂದುದಕ್ಕೆ ಪವಾಡಸದೃಶ್ಯವಾದ ಒಂದು ಹಿನ್ನೆಲೆಯು ಇದೆ. ಅದೆಂದರೆ ಒಮ್ಮೆ ಶ್ರೀಗಳವರು ಅನಾರೋಗ್ಯದಿಂದ ಇದ್ದಾಗ ಇನ್ನೇನು ಆಯು: ಪ್ರಮಾಣವೇ ಮುಗಿಯಿತೆಂದು ಹೇಳಿತ್ತಿದ್ದ ಹೊತ್ತಿನಲ್ಲಿ ಈಸುದ್ಧಿಯನ್ನು ತಿಳಿದು ಶ್ರೀಗಳವರನ್ನು ಕಾಣಲು ಸುತ್ತೂರಿಗೆ ದಯಮಾಡಿಸಿದ ಮೈಸೂರು ಅರಮನೆಯ ಪಂಚಗವೀಮಠಧ್ಯಕ್ಷರಾದ ಪೂಜ್ಯ ಶ್ರೀ.ನಿ.ಪ್ರ.ಸ್ವ.ಶ್ರೀ ಗೌರಿಶಂಕರ ಮಹಾಸ್ವಾಮಿಗಳವರು ಶ್ರೀ ಮಠದಲ್ಲಿ ಸೇರಿದ ಭಕ್ತಾದಿಗಳಿಗೆಲ್ಲ ಅಭಿಯವನ್ನಿತ್ತು ಮಂತ್ರಲೇಖನ ತಪಸ್ಸಿನಲ್ಲಿ ತೊಡಗಿಸಿದರು. ಅದರಂತೆ ಅಂದಿನಿಂದ ಮೊದಲುಗೊಂಡು ಶಿವನೊಡನೆ ಕೊಡುವ ಕೊನೆಯ ಕ್ಷಣದವರೆಗೂ ಅಖಂಡವಾಗಿ ಮಹಾಮಂತ್ರಲೇಖನ ತಪಸ್ಸನ್ನು ನಡೆಸಿ ಮಹರ್ಷಿಗಳೆನಿಸಿದರು. ಹಗಲಿರುಳು ಮಂತ್ರವನ್ನು ಬರೆಬರೆದು ಜೀವನವ ಬಗೆಗೂಳಿಸಿ ಮಂತ್ರಮಯರಾಗಿದ್ದು, ಶಿವಮಂತ್ರ ಬರೆಯುತ್ತಲೆ, ಬಯಲಾದ ಮಹಿಮಾ ಪುರುಷರಾದರು.ಲೋಕಹಿತಾರ್ಥವಾಗಿಷಟ್ಕೋಟಿ ಮಹಾಮಂತ್ರಗಳನ್ನು ಬರೆದು ಪವಿತ್ರ ಕೃತಿಗಳಾದ ಆ ಮಹಾಮಂತ್ರ ಸಂಪುಟಗಳನ್ನು ಶ್ರೀ ಮಠದಲ್ಲಿ ಸಂಸ್ಥಾಪಿಸಿ ಅಪೂರ್ವವೂ ಅಕ್ಷಯವೂ ಆದ ಅಮೂಲ್ಯ ನಿಧಿಯೆನಿಸಿದ ಮಹಾಮಂತ್ರ ಸಂಪತ್ತನ್ನು ಲೋಕೋದ್ಧಾರಕ್ಕಾಗಿ ಧಾರೆಯೆರದು ಶ್ರೀ ಕ್ಷೇತ್ರದ ಮಹಿಮೆಯನ್ನು ಹೆಚ್ಚಿಸಿದರು. ಇದರಿಂದ ಶ್ರೀ ಪೀಠದ ಅಧ್ಯಾತ್ಮಿಕ ಸಂಪತ್ತು ಅತ್ಯಧಿಕವಾಗಿ ಪ್ರಕಾಶಗೊಂಡಿತ್ತು.ಇಂದು ಸುತ್ತೂರು ಜಗದ್ಗುರುಪೀಠ' ನಡೆಯುತ್ತಿರುವುದು ಶ್ರೀಗಳವರ ಮಹಾಮಂತ್ರ ತಪ್ಪಸ್ಸಿನ ಫಲದಿಂದಾಗಿಯೆಂದು ಹೇಳಬಹುದು.

ಶ್ರೀಗಳವರಿಂದ ರಚಿತವಾದ ಈ ಮಹಾಮಂತ್ರ ಸಂಪುಟಗಳನ್ನು ಅವಲೋಕಿಸಿದ ನಾಡಿನ ಮಹಾನುಭಾವರನೇಕರು ಆಶ್ಚರ್ಯಚಕಿತರಾಗಿ ಮಂತ್ರಮುಗ್ದರಾಗಿ ತಮಗಾದ ಮಹಾದಾನಂದವನ್ನು ಹೃದಯತುಂಬಿ ಆಗಾಗ್ಗೆ ವ್ಯಕ್ತಪಡಿಸಿದ್ದಾರೆ. ಅಂತಹ ಅಸಂಖ್ಯಾತ ಅಭಿಮತಗಳಲ್ಲಿ ಉದಾಹರಣೆಗಾಗಿ ಒಂದನ್ನು ಉಲ್ಲೇಖಿಸಬಹುದಾಗಿದೆ. ಈ ಸಂದರ್ಭದಲ್ಲಿ ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಡಾ ಗೊರುರು ರಾಮಸ್ವಾಮಿ ಅಯ್ಯಂಗಾರ್ ಅವರು ಶ್ರೀಗಳವರು ನಡೆಸುತ್ತಿದ್ದ ಮಹಾಮಂತ್ರಲೇಖನ ತಪಸ್ಸನ್ನು ಕಣ್ಣಾರೆ ಕಂಡು ಮನಸಾರೆ ಮೆಚ್ಚಿ ಬರೆಯುತ್ತಾರೆ.

ಈ ಸಂಸ್ಥೆಯನ್ನು ಶ್ರೀಗಳ ತಪಃ ಪ್ರಭಾವ ಅನಾಸಕ್ತಿ ಇವು ನಡೆಸುತ್ತಿವೆ ಶಿವಭಕ್ತಿ, ಲಕ್ಷ ಜನ ಮಾಡಲಾಗದ ಕಾರ್ಯ ಮಾಡುತ್ತದೆ ಯಾವುದು ಸಾಮಾನ್ಯ ಜನರಿಗೆ ನಿರುಪಯುಕ್ತವಾಗಿ ತೋರುವುದೋ ಅವೇ ಲೋಕಕ್ಕೆ ಕಲ್ಯಾಣ ಮಾಡುತ್ತದೆ. ಹರಿಶ್ಚಂದ್ರ ರಾಜ್ಯವನ್ನು ವಿಶ್ವಾಮಿತ್ರನಿಗೆ ಕೊಟ್ಟಿದು ಸಾಮಾನ್ಯರಿಗೆ ಹೆಡ್ಡತನವಾಗಿ ತೋರುತ್ತದೆ. ಆದರೆ ಜಗತ್ತಿಗೆ ಕಲ್ಯಾಣವಾಗಿರುವುದು ಅದರಿಂದಲೇ ಶ್ರೀಗಳವರು ಬರೆದಿರುವ ಎರಡು ಆಳು ಹೊರಬೇಕಾದ ಇಪ್ಪತ್ತೆರಡು ವಾಲ್ಯೂಮ್ ಶಿವಮಂತ್ರ ಮಾಡಿದ್ದಕ್ಕೆಲ್ಲ ಪ್ರತಿಫಲಬೇಕೆನ್ನುವ ಆಧುನಿಕನಿಗೆ ಬರಿಯ ವ್ಯರ್ಥವಾಗಿ ತೋರಿದರು ತೋರಬಹುದು ಆದರೆ ಈ ಜಗತ್ತು ಉಳಿದಿರುವುದು ಈ ಜಗತ್ತಿನ ಕಲ್ಯಾಣವಾಗಿರುತ್ತಿರುವುದು ಇದರಿಂದ ಇದು ಅಣುಬಾಂಬಿಗಿಂತ ಹೆಚ್ಚು ಶಕ್ತಿ. ಆದರೆ ಅಣುಬಾಂಬು ನಾಶಮಾಡುತ್ತದೆ ಶಿವನಾಮ ರಕ್ಷಣೆಕೊಡುತ್ತದೆ.

ಇಂತಹ ಸಂಸ್ಥೆಗಳನ್ನು ನೋಡುವುದರಿಂದ ಭಾರತದ ಹಿನ್ನೆಲೆ ಋಷಿಗಳ ಧರ್ಮ, ಆಶ್ರಮ, ಸತ್ಯ ಇವು ಜ್ಞಾಪಕಕ್ಕೆ ಬಂದು ನಿಜವಾದ ಭಾರತ ಹೃದಯ ಇಲ್ಲಿರುವುದು ಕಾಣುತ್ತದೆ.

**ಶಿವಮಂತ್ರ ಮಹಿಮೆ**

ಇದು ಕೈವಲ್ಯಾಪೇಕ್ಷಿಗಳಿಗೆ ಶಿವಯೋಗಿಗಳವರು ಕರುಣಿಸಿಕೊಟ್ಟಿರುವ ಒಂದು ಕೈದೀವಿಗೆ ಶಿವಮಂತ್ರದ ವಿಚಾರದಲ್ಲಿ ಶಿವಾನುಭವಿಗಳಾದ ಅನೇಕ ಮಹನೀಯರ ಅನುಭವದ ಜ್ಞಾನಸಾರಾಮೃತವನ್ನು ಒಂದೆಡೆ ಸಂಗ್ರಹಿಸಿ ತುಂಬಿಕೊಂಡಿರುವ ವೇದೋಪನಿಷತ್ತು ಶಾಸ್ತ್ರಾಗಮ ಪುರಾಣದಿಗಳಿಂದ ಹಿಡಿದು ಋಷಿಕವಿಗಳ ಕಾವ್ಯಾದಿಗ್ರಂಥಗಳಲ್ಲಿ ಬಂದಿರುವ ಶಿವಮಂತ್ರದ ಮಹಿಮೆಗಳನ್ನು ಅರ್ಥವಿವರಣೆಗಳೊಂದಿಗೆ ವಿವರಿಸಿರುವ ಮತ್ತು ತತ್ತ್ವಾಭಿಮಾನಿಗಳಿಗೆ ತುಂಬ ಮೆಚ್ಚು ಎನಿಸಿರುವ ಒಂದು ಅನರ್ಘ್ಯಕೃತಿ ಇದು. ಶಿವಮಂತ್ರ ಮಹಿಮೆಯು ಶ್ರೀ ಸಾಮಾನ್ಯರಿಗೂ ಸುಲಭಗ್ರಾಹ್ಯವಾಗುವಂತೆ ಸರಳಸುಂದರವಾಗಿ ಬರೆದಿರುವ ಅಪೂರ್ವ ಕೃತಿ ಇದು.

ಶ್ರೀಯಂ ಪಡವೊಡೆ ಶಾಶ್ವತ
ದಾಯುಷ್ಯದಪೇಕ್ಷೆ ತನಗೆ ಕೈಗೂಡುವೊಡಾ
ಮಾಯೆಗೊಳಗಾಗದಿರ್ಪೊಡೆ
ಜೀಯನೆ ಜಪಮಣಿಂ ನಮಶ್ಶೀವಾಯೆಂಬ ಪದಂ

ಎಂದು ಮೊದಲಾಗುವ ಈಗ್ರಂಥವು ಶಿವಾನುಭವಿ ಕೊಂಡಗುಳಿಕೇಶಿರಾಜ ಷಡಕ್ಷರ ಮಂತ್ರಮಹಿಮೆಯನ್ನು ತಾತ್ಪರ್ಯದಿಗಳೊಡನೆ ವಿವರಿಸಿರುವುದರ ಜೊತೆಗೆ ಮಹಾಕವಿ ಹರಿಹರದೇವ ವಿರಚಿತ ಪಂಚಾಕ್ಷರರಗಳೆ, ನಮಃಶಿವಾಯರಗಳೆಗಳನ್ನೂ ಶಿವಕವಿಶಂಕರದೇವ ವಿರಚಿತ ಷಡಕ್ಷರರಗಳೆಗಳನ್ನೂ ಸೇರಿಸಿ ವಿವೇಕಚಿಂತಾಮಣಿ. ವೀರಶೈವಾಮೃತ ಮಹಾಪುರಾಣ, ಗಣಭಾಷಿತ ರತ್ನಮಾಲೆ, ರಾಜಶೇಖರ ವಿಳಾಸ ಮೊದಲಾದ ಗ್ರಂಥಗಳಿಂದ ಆಧಾರಗಳನ್ನು ಸಂಗ್ರಹಿಸಿಕೊಟ್ಟ ಸ್ವಾನುಭವದ ಸಿಹಿಯನ್ನೆರೆದು ಅನುಭಾವದಡಿಗೆಯ ಮಾಡಿ ನೀಡಿರುವ ಮಂಗಳ ಕೃತಿ ಇದು.

ಈ ಅಮೂಲ್ಯ ಕೃತಿರತ್ನವನ್ನು ಮೆಚ್ಚಿ ಡಾ.ಬಿ.ಶಿವಮೂರ್ತಿಶಾಸ್ತ್ರಿಗಳವರು ಬರೆದಿರುವ ಮಾತುಗಳು ಮನನೀಯವಾಗಿ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯಬೇಕೆನ್ನವದರೂ ಮೋಕ್ಷಾಕಾಂಕ್ಷಿಗಳೂ, ಆಯುರಾರೋಗ್ಯ ಭಾಗ್ಯವನ್ನು ಬಯಸುವವರೂ, ಭೂತಪಿಶಾಚಿಗಳ ಬಂದೆಯಿಂದ ಪಾರಾಗಬಯಸುವವರೂ ಈ ಮಹಾಮಂತ್ರವನ್ನು ಸ್ಮರಿಸುವುದು ಜಪಿಸುವುದು ಲಾಭಪ್ರದವಾದುದು ಈ ಅಮೋಘವಾದ ವಿಚಾರಗಳನ್ನೇ ಶಿವಮಂತ್ರ ಮಹಿಮೆ ಎಂಬ ಗ್ರಂಥದಲ್ಲಿ ಶಾಸ್ತ್ರ ಮತ್ತು ಅನುಭವ ಸಮ್ಮತವಾಗಿ ಹೇಳಲಾಗಿದೆ.

ಶ್ರೀ ಶಿವಯೋಗಿಗಳವರ ಪ್ರಣವ ಪಂಚಾಕ್ಷರಿ ಮಹಾಮಂತ್ರ ಲೇಖನ ತಪಸ್ಸಿನ ದಿವ್ಯಪ್ರಭಾವಕ್ಕೆ ಆಕರ್ಷಿತರಾದ ಆದರ್ಶ ರಾಜರ್ಷಿಗಳೆನಿಸಿದ ಮೈಸೂರು ಸಂಸ್ಥಾನದ ಶ್ರೀಮನ್ಮಮಹಾರಾಜ ಶ್ರೀಜಯಚಾಮರಾಜ ಒಡೆಯರ್‌ರವರು ಶ್ರೀಮಠದ ಅಚ್ಚುಮೆಚ್ಚಿನ ಆತ್ಮೀಯ ಶಿಷ್ಯರಾಗಿ ತಮ್ಮ ಅನನ್ಯ ಗುರುಭಕ್ತಿಯನ್ನು ಶ್ರೀಮಠದ ಇತಿಹಾಸದಲ್ಲಿ ಶಾಶ್ವತಗೊಳಿಸಿ ಶ್ರೀಗಳವರ ಪೂರ್ವಾನುಗ್ರಹಕ್ಕೆ ಪಾತ್ರರಾಗಿದ್ದುದು. ಅವರು ತಮ್ಮ ಗುರುವರ್ಯರಿಂದ ರಚಿತವಾದ ಶಿವಮಂತ್ರಮಹಿಮೆ ಕೃತಿಗೆ ಸಂದೇಶವನ್ನು ನೀಡುತ್ತಾ ತಮಗಾದ ಅಪಾರ ಸಂತೋಷವನ್ನು ಈ ರೀತಿ ವ್ಯಕ್ತಪಡಿಸಿರುವರು. ಪೂಜ್ಯ ಶ್ರೀ ಜಗದ್ಗುರುಗಳವರಿಂದ ರಚಿತವಾದ ಹಲವಾರು ಮಂತ್ರಕೃತಿಗಳ ಸಂದರ್ಶನ ಮಾಡಿ ನಾವು ಆನಂದಪಟ್ಟಿದ್ದೇವೆ... ನೂರಾರು ಗ್ರಂಥಗಳಲ್ಲಿರುವ ಷಡಕ್ಷರ ಮಹಾಮಂತ್ರದ ವಿಷಯಗಳನ್ನು ಒಂದೆಡೆಗೆ ಸೇರಿಸಿ ಹಸನಾದ ಹೊಸ ಪೂಮಾಲೆಯನ್ನು ಮಾಡಿ ಕನ್ನಡ ಜನತೆಗೆ ನೀಡಿದ್ದಾರೆ.

## ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಸುತ್ತೂರು ಶ್ರೀ ಜಗದ್ಗುರು ಪೀಠದ ಧಾರ್ಮಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವಾಕ್ಷೇತ್ರಗಳನ್ನು ನಾಡಿನ ಉದ್ದಗಲಕ್ಕೂ ವಿಸ್ತರಿಸಿ, ಸಂಸ್ಥಾನದ ಮಠದ ಕೀರ್ತಿಯನ್ನು ವಿಶ್ವದಗಲಕ್ಕೂ ಹಬ್ಬಿಸಿ ಅವಿಶ್ರಾಂತ ದುಡಿಮೆಯ ಕಾಯಕದಲ್ಲಿ ನಿರತರಾದ' ಶ್ರೀ ಮನ್ಮಹಾರಾಜ ರಾಜಗುರುತಿಲಕ ಜಗದ್ಗುರು ಶ್ರೀಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರು ಕೇವಲ ಹನ್ನೆರಡನೆಯ ವಯಸ್ಸಿನಲ್ಲಿಯೆ (೨೪-೨-೧೯೨೮) ಮಹಾಸಂಸ್ಥಾನದ ಆಶ್ರಮಾಧಿಕಾರವನ್ನು ಪಡೆದ ಪೂಜ್ಯರು ಸಂಸ್ಕೃತ ವ್ಯಾಸಂಗಕ್ಕಾಗಿ ಮೈಸೂರಿಗೆ ಆಗಮಿಸಿದರು.ಆಗತಾನೇ ಮೈಸೂರು ನಗರದಲ್ಲಿ ಸ್ಥಾಪಿತವಾಗಿ ತಮ್ಮ ಪೀಠದ ವತಿಯಿಂದ ನಡೆಯುತ್ತಿದ್ದ ಕ್ಯಾತನಹಳ್ಳಿ ಸಾವುಕಾರ್ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ ಮುಂದುವರಿಸಿ ೧೯೪೫ರಲ್ಲಿ ಸಾಹಿತ್ಯ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಆಧ್ಯಾತ್ಮಿಕ ಮತ್ತು ಲೌಕಿಕ ವಿದ್ಯೆಗಳಲ್ಲಿಯೂ ಸೂಕ್ತ ಶಿಕ್ಷಣವನ್ನು ಪಡೆದು ಆ ಬಳಿಕ ಸಮಾಜೋದ್ಧಾರ ಕಾರ್ಯಗಳಲ್ಲಿ ಧುಮುಕಿದರು. ತಾವು ಮೈಸೂರಿನಲ್ಲಿ ಓದುತ್ತಿದ್ದಾಗ ತಮ್ಮೊಡನೆಗೆ ಕಲಿಯುತ್ತಿದ್ದ ಸಮಾಜದ ಹಲವಾರು ಮಂದಿ ಮಕ್ಕಳ ಊಟ ವಸತಿಗಾಗಿ ಪಡುತ್ತಿದ್ದ ಕಷ್ಟ ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು ಮನಕರಗಿದ ಪೂಜ್ಯ ಶ್ರೀಗಳವರು ತಮ್ಮ ವಿದ್ಯಾರ್ಜನೆಗಾಗಿ ಶ್ರೀಮಠದಿಂದ ಕಳುಹಿಸುತ್ತಿದ್ದ ದ್ರವ್ಯದಿಂದಲೇ ಹತ್ತಾರು ಮಂದಿ ವಿದ್ಯಾರ್ಥಿಗಳಿಗೂ ತಮ್ಮೊಡನೆ ಊಟೋಪಚಾರಗಳಿಗೆ ವ್ಯವಸ್ಥೆ ಮಾಡಿ ಅವರ ಮೇಲೆ ವಿಶೇಷವಾದ ಮಾತೃ ಹೃದಯದ ವಾತ್ಸಲ್ಯವನ್ನು ಬೀರಿದರು.

"ಈ ಶಿಷ್ಯವಾತ್ಸಲ್ಯವೇ ಅಂಕುರಿಸಿ ಮುಂದೆ ಅಸಂಖ್ಯ ವಿದ್ಯಾಸಂಸ್ಥೆಗಳು ಶಾಖೋಪಶಾಖೆಗಳಾಗಿ ನಾಡಿನ ಎಲ್ಲ ಕಡೆಗೂ ಹರಡಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವೆಂಬ ಪವಿತ್ರ ನಾಮಾಂಕಿತವನ್ನು ತಳೆದು ಹೆಮ್ಮರವಾಗಿ ಬೆಳೆದು ಜ್ಞಾನ ಪಿಪಾಸುಗಳಿಗೆ ನಾಡಿನ ವಿದ್ಯಾರ್ಥಿ ಸಂಕುಲಕ್ಕೆ ಕಲ್ಪವೃಕ್ಷವೆನಿಸಿ ಜ್ಞಾನದಾಸೋಹ, ಅನ್ನದಾಸೋಹಗಳನ್ನು ನಡೆಸುತ್ತಿರುವುದು ಲೋಕವಿಖ್ಯಾತವಾಗಿದೆ. ಪೂಜ್ಯರು ಅನೇಕ ಶಾಲಾಕಾಲೇಜುಗಳನ್ನೂ ಉಚಿತ ಪ್ರಸಾದನಿಲಯಗಳನ್ನೂ ಹತ್ತಾರು ಕಡೆಗಳಲ್ಲಿ ಸ್ಥಾಪಿಸಿ ಅನ್ನದಾನ, ಜ್ಞಾನ ಪ್ರಸಾರ ಕಾರ್ಯಗಳನ್ನು ಆತ್ಯದ್ಭುತವಾಗಿ ನಡೆಸುತ್ತಿರುವ ಪವಾಡ ಪುರುಷರಾಗಿದ್ದರು."[೧೭] ತಮ್ಮ ಅಧ್ಯಾತ್ಮಿಕ ತಪಃ ಪ್ರಭಾವದಿಂದ ಜನತೆಯಲ್ಲಿ ಧಾರ್ಮಿಕ ಅರಿವನ್ನು ಮೂಡಿಸಿ

---

೧೭. ಶಿವಮಂತ್ರ ಮಹಿಮೆ – ಪ್ರಸ್ಥಾವನೆ : ಪುಟ – ೧೧

ಮುಕ್ತಿಪಥದಲ್ಲಿ ಮುನ್ನಡೆಸುವ ಮಹಿಮರು ಆಗಿದಾರೆ. ಸಾಹಿತ್ಯಾದಿ ಕಲೆಗಳಲ್ಲಿ, ಸನಾತನ ಸಂಸ್ಕೃತಿಯಲ್ಲಿ ಮೊದಲಿಂದಲೂ ವಿಶೇಷ ಅಭಿರುಚಿ ಆಸಕ್ತಿಯನ್ನು ತಾಳಿರುವ ಪೂಜ್ಯ ಶ್ರೀಗಳವರು ಕಲಾವಿದರಿಗೆ ಕೊಡುಗೈಯ ಸಹಾಯ ನೀಡಿ ಪ್ರೋತ್ಸಾಹ ಕೊಡುತ್ತಿರುವರು. ತಾವೂ ಕೂಡ ಶರಣರ ಕೆಲವು ಕೃತಿಗಳನ್ನು ಸಂಪಾದಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿರುವುದನ್ನು ಕನ್ನಡಿಗರು ನೆನೆಯುತ್ತಿರುವರು. ಪೂಜ್ಯ ಶ್ರೀಗಳು ಘನಲಿಂಗಿದೇವರ ವಚನಗಳಂಥ ಮುಂತಾದ ಗ್ರಂಥಗಳ ಸಂಪಾದನೆ ಮುಂತಾದ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕರಕಮಲಸಂಜಾತರಾಗಿರುವ ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸ್ನಾತಕೋತ್ತರ ಪದವಿದರರು, ಉತ್ತಮ ವಾಗ್ಮಿಗಳು ಮತ್ತು ಕಲೆ ಸಂಸ್ಕೃತಿಯ ಪೋಷಕರು. ಇವರು ಸುತ್ತೂರು ಮಠದ ಪೀಠಾಧ್ಯಕ್ಷರಾದ ಮೇಲೆ ಸಾಹಿತ್ಯ ಶಿಕ್ಷಣ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಹ ನೀಡಿದರು. ಹಿರಿಯ ಗುರುಗಳ ಆಶಯದಂತೆ ಶ್ರೀಮಠದ ಸರ್ವತೋಮುಖ ಬೆಳವಣಿಗೆಯಲ್ಲಿ ಶ್ರೀಗಳ ಪಾತ್ರ ಮಹತ್ತರವಾದುದು. ಜೆ.ಎಸ್.ಎಸ್ ಪ್ರಕಟಣಾಮಾಲೆಯ ಮೂಲಕ ನೂರಾರು ಕೃತಿಗಳ ಹೊರ ಬರಲು ಕಾರಣೀಭೂತರಾಗಿದ್ದಾರೆ. ಅಲ್ಲದೆ ಇಂದು ಪ್ರಕಟಣೆಗಾಗಿ ಒಂದು ವಿಭಾಗವನ್ನು ತೆರೆದು ಆ ಮೂಲಕ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಸ್ವತಃ ಕವಿಗಳಾದ ಶ್ರೀಗಳ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಅಧ್ಯಯನ ಶಿಲರಾಗಿದ್ದು 'ಮುಪ್ಪಿನಷಟಕ್ಷರಿಗಳ ಕೈವಲ್ಯ ಪದಗಳು' ಕೃತಿಯ ವಿಮರ್ಶಾತ್ಮಕ ಅರ್ಥಪೂರ್ಣ ಕೃತಿ ಪ್ರಕಟಸಿದ್ದಾರೆ.

ಶ್ರೀ ಸುತ್ತೂರು ಮಠವು ಸಾಹಿತ್ಯ ಸೇವೆ ಮತ್ತು ಬೆಳವಣಿಗೆಗೆ ಅನನ್ಯ ಸೇವೆ ಸಲ್ಲಿಸುತ್ತಿರುವ ಮತ್ತು ಆಧುನಿಕತೆಗೆ ತಕ್ಕಂತೆ ಹೊಂದಿಕೊಳ್ಳತ್ತ ಬೆಳೆಯುತ್ತಿದೆ. ಸಾಹಿತ್ಯಕ ಕೊಡುಗೆ ಎಂದರೆ ಸುತ್ತೂರುಮಠ ಸುತ್ತೂರುಮಠ ಎಂದರೆ ಸಾಹಿತ್ಯಕೆ ಬೆಳವಣಿಗೆ ಎಂಬುದಾಗಿದೆ. ಹಿಂದಿನ ಪರಂಪರೆಯ ಗುರುಗಳು ಹಾಕಿಕೊಟ್ಟಂತಹ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಇಂದಿನ ಶ್ರೀಗಳು ಪುಸ್ತಕ ಸಾಹಿತ್ಯ ಬೆಳವಣಿಗೆಗಾಗಿ ಸುತ್ತೂರುಮಠದ ವತಿಯಿಂದ, ವಿದ್ಯಾಪೀಠದ ಆಶ್ರಯದಲ್ಲಿ 'ಪ್ರಕಟಣ ವಿಭಾಗ' ಎಂಬ ಒಂದು ಶಾಖೆಯನ್ನೆ ಪ್ರಾರಂಭಿಸಿದೆ. ಈ ವಿಭಾಗವನ್ನು ಹುಟ್ಟುಹಾಕಿದವರು ಡಾ. ರಾಜೇಂದ್ರ ಸ್ವಾಮಿಗಳು ಮತ್ತು ಅವರ ಹಿರಿಯ ಗುರುಗಳಾದ ಶ್ರೀ ಜಗದ್ಗುರು ಶಿವರಾತ್ರೀಶ್ವರರು, ಇದರ ಉನ್ನತಿಗೆ ಕಾರಣರಾದವರು ಶ್ರೀಶಿವರಾತ್ರಿದೇಶಿಕೇಂದ್ರ

ಮಹಾಸ್ವಾಮಿಗಳು. ಈ ರತ್ನತ್ರಯರಾದ ಶ್ರೀಗಳಿಂದ ಕರ್ನಾಟಕದಲ್ಲಿ ಅದರಲ್ಲೂ ಮೈಸೂರು ಪ್ರಾಂತ್ಯದಲ್ಲಿ ವೀರಶೈವ ಮತು ಇತರೆ ಸಾಹಿತ್ಯ ಬೆಳೆಯುತ್ತಿರುವುದು ಕಂಡುಬರುತ್ತದೆ.

**ಪ್ರಕಟಣ ವಿಭಾಗ :**

ಸುತ್ತೂರು ಮಠದ ಮಹಾವಿದ್ಯಾಪೀಠದ ಒಂದು ಪ್ರಮುಖವಾದ ಅಂಗವಾದ ಪ್ರಕಟಣ ವಿಭಾಗವು ಧರ್ಮ ಗ್ರಂಥಗಳ ಪ್ರಕಟಣೆ ಧರ್ಮಪ್ರಸಾರ ನಿಯತಕಾಲಿಕೆಗಳ ಪ್ರಕಟಣೆ. ಶ್ರೀ ಶಿವರಾತ್ರೀಶ್ವರಪ್ರಶಸ್ತಿ ಪ್ರಧಾನ, ವಿಚಾರಗೋಷ್ಠಿಗಳ ಆಯೋಜನೆ, ಬೆಳಂದಿಗಳಸಂಗೀತ, ಶಿವಾನುಭವ ದಾಸೋಹ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳ ಜೊತೆ ಜೊತೆಗೆ ಜೆ.ಎಸ್.ಎಸ್ ಮಹಾವಿದ್ಯಾಪೀಠದ ಅಂಗಸಂಸ್ಥೆಗಳಿಗೆ ಬೇಕಾದ ಪುಸ್ತಕಗಳು, ನಮೂನೆಗಳು, ಆಹ್ವಾನ ಪತ್ರಿಕೆಗಳು, ಬ್ರೋಷರ್‌ಗಳು ಮುಂತಾದ ಮುದ್ರಣ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಆದಿಜಗದ್ಗುರುಗಳ ಜಾತ್ರಾ ಮಹೋತ್ಸವ ಮತ್ತು ರಾಜೇಂದ್ರ ಶ್ರೀಗಳವರ ಜಯಂತಿ ಮಹೋತ್ಸವದ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಯಲ್ಲಿ ಈವಿಭಾಗವು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಗಮನಾರ್ಹ.

ಇದುವರೆಗೆ ಈ ಪ್ರಕಟಣ ವಿಭಾಗದಿಂದ ಒಟ್ಟು ೧೯೧ ಗ್ರಂಥಗಳು ಪ್ರಕಟವಾಗಿದೆ (ಅದರಲ್ಲಿ ಕನ್ನಡ ೧೭೩ ಇಂಗ್ಲೀಷ್-೧೫ ತಮಿಳು-೨ ಮತ್ತು ತೆಲುಗು-೨) ಈ ಸಂಸ್ಥೆಯಿಂದ ಮೊದನೆಯ ಪುಸ್ತಕ ೧೯೩೩ ಕ್ಕಿಂತ ಹಿಂದೆಯೇ ಪ್ರಕಟವಾಗಿದ್ದರೂ, ಪ್ರಕಟಣಾ ವಿಭಾಗದಿಂದ ಒಂದು ಪ್ರತ್ಯೇಕ ಘಟಕವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ್ದು ೧೯೮೮ರಲ್ಲಿ. ಈ ವಿಭಾಗದ ಮೊದಲ ನಿರ್ದೇಶಕರು ಖ್ಯಾತಕವಿ ಶ್ರೀ.ಕೆ.ಸಿಶಿವಪ್ಪನವರು.

ಜೆ.ಎಸ್.ಎಸ್ ಮಹಾವಿದ್ಯಾಪೀಠದ ಸ್ವರ್ಣ ಮಹೋತ್ಸವದ ಅಂಗವಾಗಿ ಈ ಕೆಳಕಂಡ ಆಚಾರ್ಯ ಕೃತಿಗಳನ್ನು ಹೊರತರಲಾಗಿದೆ. ಅವುಗಳಲ್ಲಿ ಪ್ರಮುಖವಾದವು.

೧. ವಿಶ್ವಧರ್ಮ ದರ್ಶನ ಭಾಗ-೦೧ ಮತ್ತು ಭಾಗ-೨ (ಸಂ.ಯು.ಆರ್.ಅನಂತಮೂರ್ತಿ)

೨. ವೀರಶೈವ ಧರ್ಮ ದರ್ಶನ ಭಾಗ-೦೧ ಮತ್ತು ೦೨ (ಸಂ.ಡಾ.ಪ್ರಭುಶಂಕರ)

೩. ಸುತ್ತೂರು ಶ್ರೀ ಮಠದ ಪರಂಪರೆ

೪. ಜೆ.ಎಸ್.ಎಸ್ ಮಹಾವಿದ್ಯಾಪೀಠ

೫. ಸುತ್ತೂರು ಚಿತ್ರ ಸಂಪುಟ

೬. Perspectives in Education.

**ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** - ಪ್ರಕಟಣಾ ವಿಭಾಗದ ಪ್ರಮುಖ ಮುದುವಟ್ಟಾದ ಶ್ರೀಶಿವರಾತ್ರೀಶ್ವರ ಧಾರ್ಮಿಕ ದತ್ತಿಯು ೧೯೮೬ರಲ್ಲಿ ಸ್ಥಾಪಿತವಾಯಿತು. ಡಾ.ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ಸ್ಥಾಪಿಸಿದ ಈ ದತ್ತಿಯು ವೀರಶೈವ ಧರ್ಮ, ಸಾಹಿತ್ಯ, ಇತಿಹಾಸ, ಕಲೆ ಹಾಗೂ ಸಂಸ್ಕೃತಿಗಳ ಪ್ರಕಾಶನ ಹಾಗೂ ಪ್ರಸಾರದ ಗುರಿಯನ್ನೂ ಹೊಂದಿದೆ. ಧಾರ್ಮಿಕ ಕೃತಿಗಳ ಪ್ರಕಟಣೆ, ವಿಚಾರಸಂಕೀರ್ಣಗಳು, ವಿಶೇಷ ಉಪನ್ಯಾಸ, ಆಧ್ಯಾತ್ಮಿಕ ಪ್ರವಚನ, ವ್ಯಕ್ತಿತ್ವ ವಿಕಸನ ಶಿಬಿರ, ಗ್ರಾಮಾಂತರ ಪ್ರದೇಶಗಳಲ್ಲಿ ಧರ್ಮ ಪ್ರಚಾರ ಇವು ಈ ದತ್ತಿಯ ಪ್ರಮುಖ ಉದ್ದೇಶವಾಗಿದೆ.

ಆಗಿಂದಾಗ್ಗೆ ಪ್ರತಿಷ್ಠಿತ ಸಂಸ್ಥೆಗಳ ಸಹಯೋಗದೊಂದಿಗೆ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ. ಆ ವಿಚಾರ ಸಂಕೀಣಗಳಲ್ಲಿ ಮಂಡಿತವಾದವ, ಚರ್ಚಿತವಾದ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರುವ ಮೂಲಕ ಕನ್ನಡ ಸಾಹಿತ್ಯ ಬೆಳೆಯಲು ಕಾರಣೀಭೂತವಾಗಿ ಈ ಮಠದ ವಿದ್ಯಾಪೀಠ ಸದಾ ಕಾರ್ಯ ನಿರ್ವಹಿಸುತ್ತಿದೆ.

ವೀರಶೈವ ಧರ್ಮ, ದರ್ಶನ ಸಾಹಿತ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿವರ್ಷವೂ ಪ್ರಕಣವಾಗುವ ಒಂದು ಶ್ರೇಷ್ಠ ಕೃತಿಗೆ "ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಯನ್ನೂ ನೀಡಲಾಗುತ್ತಿದೆ ಈ ಪ್ರಶಸ್ತಿಯ ಮೊತ್ತ ೨೫,೦೦೦ ರೂಗಳು. ವಿಶೇಷವಾಗಿ ಆಯೋಜಿಸಿದ ಸಮಾರಂಭದಲ್ಲಿ ಪ್ರಶಸ್ತಿಯ ಜೊತೆಗೆ ಸ್ಮರಣಿಕೆ ಫಲತಾಂಬೂಲಗಳನ್ನೂ ನೀಡಿ ಪುರಸ್ಕೃತರನ್ನೂ ಗೌರವಿಸಲಾಗುವುದು. ಪ್ರಶಸ್ತಿಗೆ ಪುಸ್ತಕಗಳನ್ನು ಸೂಚಿಸುವಂತೆ ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರು, ಲೇಖಕರು, ಪ್ರಕಾಶಕರುಗಳನ್ನು ಕೋರಲಾಗುವುದು. ಇದರ ಜೊತೆಗೆ ಪ್ರತಿವರ್ಷವು ಹೊಸದಾಗಿ ನಾಮಕರಣಗೊಳ್ಳುವ ವಿದ್ವಾಂಸರಿಂದ ಆಯಾ ವರ್ಷದ ಶ್ರೇಷ್ಠ ಕೃತಿಗಳ ಪಟ್ಟಿಯನ್ನೂ ತರಿಸಿಕೊಳ್ಳಲಾಗುವುದು ಈ ಎಲ್ಲ ಪುಸ್ತಕಗಳನ್ನು ತಜ್ಞರ ಸಮಿತಿಯು ಪರಿಶೀಲಿಸಿದ ನಂತರ ಪ್ರಶಸ್ತಿಯ ಆಯ್ಕೆ ನಡೆಯುತ್ತದೆ. ಇದುವರೆಗೆ ಸುಮಾರು ೨೦ಕ್ಕಿಂತಲೂ ಹೆಚ್ಚು ವಿದ್ಯಾಂಸರು ಈ ಪ್ರಶಸ್ತಿಗೆ ಭಾಜಕರಾಗಿದ್ದಾರೆ.

ಇದಲ್ಲದೆ 'ಜೆ.ಎಸ್.ಎಸ್ ಗ್ರಂಥಮಾಲೆ' ಯಿಂದಲೂ ಸಹ ಅನೇಕ ಕೃತಿಗಳು ಹೊರಬಂದಿವೆ. ಈಮಾಲಿಕೆಯಲ್ಲಿ ಇವರೆಗೆ ೮೭ ಕ್ಕಿಂತಲೂ ಹೆಚ್ಚು ಕೃತಿಗಳು ಹೊರಬಂದಿವೆ. ಅವುಗಳ ಭಾಷಾವಾರು ಪ್ರಕಟಣೆ ಈ ರೀತಿ ಇದೆ ಕನ್ನಡ-೬೯. ಇಂಗ್ಲೀಷ್-೧೫, ತಮಿಳು-೨, ತೆಲುಗು-೧ ಈ ಜೆ.ಎಸ್.ಎಸ್ ಗ್ರಂಥಮಾಲೆಯ ಮೊದನೆಲಯ ಕೃತಿ "ಶ್ರೀಸುತ್ತೂರು ಸಿಂಹಾಸನದಗುರುಪರಂಪರೆ" ಇದು ಪ್ರಕಟಣೆಗೊಂಡಿದು ೧೯೩೩ರಲ್ಲಿ ಆಗ ಪ್ರಕಟಣಾ ವಿಭಾಗ ಇನ್ನು ಸ್ಥಾಪಿತವಾಗಿರಲಿಲ್ಲ. ಜೆ.ಎಸ್.ಎಸ್ ಕಾಲೇಜುಗಳ ಹಿರಿಯ ಪ್ರಾಧ್ಯಾಪಕರುಗಳೇ ಪರಿಶೀಲಿಸಿ

ಶ್ರೀಗಳವರ ಆದೇಶಾನುಸಾರ ಪುಸ್ತಕಗಳನ್ನು ಪ್ರಕಟಿಸುವ ವ್ಯವಸ್ಥೆ ಇತ್ತು .ಇದಲ್ಲದೆ ಇನ್ನು ಕೆಲವು ಪ್ರತಿಷ್ಠಿತ ಯೋಜನೆಗಳನ್ನು ಕೈಗೊಂಡಿದೆ.

* **ವಚನ ವ್ಯಾಖ್ಯಾನ ಮಾಲೆ**: ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಚನ್ನಬಸವಣ್ಣ ಇವರುಗಳ ಎಲ್ಲ ವಚನಗಳ ವ್ಯಾಖ್ಯಾನ ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಉಳಿದ ವಚನಕಾರರ ಆಯ್ದ ವಚನಗಳು ಎಂಟು ಸಂಪುಟಗಳಲ್ಲಿ ಹೊರಬರುತ್ತಿವೆ.

* **ಶರಣ ಸಂಸ್ಕೃತಿ ಮಾಲೆ:** ಇದುವರೆಗೆ ೫೪ ಪುಸ್ತಕಗಳು ಪ್ರಕಟವಾಗಿವೆ. ಇನ್ನೂ ೪೬ಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸುವ ಉದ್ದೇಶವಿದೆ.

* **ವೀರಶೈವ ಪುಣ್ಯಪುರುಷರ ಮಾಲೆ:** ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿನ ವೀರಶೈವ ಸಾಧಕರ ಜೀವನ ಚರಿತ್ರೆಯನ್ನು ಪರಿಚಯಿಸುವ ಯೋಜನೆ. ೧೦ಕ್ಕಿಂತಲೂ ಹೆಚ್ಚು ಕೃತಿಗಳು ಬಿಡುಗಡೆಗೆ ಸಿದ್ಧಗೊಂಡಿದೆ. ಇತರ ಪ್ರತಿಷ್ಠಿತ ಅತ್ಯಮೂಲ್ಯ ಪ್ರಕಟಣೆಗಳು ವೃಷಬೇಂದ್ರವಿಳಾಸ, ಸರ್ವದರ್ಶನ ಸಂಗ್ರಹ, ಸ್ವರವಚನಗಳು, ಭಗವಚ್ಚಿಂತನ, ನಾನಾರು, ಶೂನ್ಯಸಂಪಾದನೆಯ ಪರಾಮರ್ಶೆ ಮತ್ತು ಭಕ್ತಿ ಭಂಡಾರಿ ಬಸವಣ್ಣನವರು ಹಾಗೂ ಆಂಗ್ಲ ಭಾಷೆಯಲ್ಲಿನ Heart ti Heart.

* **ಜೆ.ಎಸ್.ಎಸ್ ಅಂತರ ರಾಷ್ಟ್ರೀಯ ಸಂಸ್ಕೃತಿ ಸಂಶೋಧನಾ ಕೇಂದ್ರ :**

ಕೇಂದ್ರಸರ್ಕಾರದ ಮಾನವಸಂಪನ್ಮೂಲ ಇಲಾಖೆಯ ಅನುದಾನದಿಂದ ಜಗದ್ಗುರು ಡಾ.ಶ್ರೀ.ಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳ ಅಂತರಾಷ್ಟ್ರೀಯ ಸಂಸ್ಕೃತ ಸಂಶೋಧನಾ ಕೇಂದ್ರವನ್ನು ೨೦೦೧ರಲ್ಲಿ ಪ್ರಾರಂಭಿಸಲಾಗಿದೆ. ಇದರಲ್ಲಿ ಇಬ್ಬರು ಸಹಾಯಕ ಸಂಶೋಧಕರು ಕೆಲಸ ಮಾಡುತ್ತಿದ್ದು, ಇವರ ಸಂಭಾವನೆಯನ್ನು ಮಾನವ ಸಂಪನ್ಮೂಲ ಇಲಾಖೆ ಭರಿಸುತ್ತಿದೆ. ಸಹಾಯಕರಾದ ಶ್ರೀ.ಕೆ.ಸಿ.ಗುರುಮಲ್ಲದೇವರು ಸಂಪಾದಿಸಿರುವ 'ಶಿವಸಂಹಿತೆ" ಪ್ರಕಟವಾಗಿದೆ. ಅಲಂಕಾರಿಕ ಶಾರದಾತನಯನು ರಚಿಸಿರುವ ಕೃತಿಯನ್ನು ಸಂಪಾದಿಸಿದ್ದು ಮುದ್ರಣ ಪೂರ್ಣಗೊಳಿಸಿದೆ. 'ಅಮರಕೋಶದ ಅರ್ಥಾನುಕ್ರಮಣಿಕೆ" ಮತ್ತು "ಸಂಸ್ಕೃತ ಕವಿ–ಕಾವ್ಯ ಕೋಶ" ಕೃತಿಗಳ ಕಾರ್ಯವು ಕೂಡ ಸಾಗುತ್ತಿದೆ. ಜೆ.ಎಸ್.ಎಸ್. ವಿದ್ಯಾಪೀಠವು ಸಾಹಿತ್ಯಕ ಸೇವೆಯನ್ನು "ಮೊಬೈಲ್‌ವ್ಯಾನ್ ಮೂಲಕ, ಶ್ರೀಸಾಮಾನ್ಯರ ಮನೆಬಾಗಿಲಿಗೇ ಶರಣ ಸಂದೇಶ ತಲುಪಬೇಕೆಂಬ ಉದಾತ್ತ ಧ್ಯೇಯದಿಂದ ಒಂದು ವಿಶೇಷ ವಿನ್ಯಾಸವುಳ್ಳ ಮೊಬೈಲ್ ವ್ಯಾನಿನಲ್ಲಿ ಜೆ.ಎಸ್.ಎಸ್ ಪ್ರಕಣೆಗಳು ಧ್ವನಿ ಸುರುಳಿಗಳು ಧಾರ್ಮಿಕ ಸ್ಮರಣೆಗಳನ್ನೂ ಗ್ರಾಮಾಂತರ ಪ್ರದೇಶಗಳಿಗೆ

ಕಳುಹಿಸಲಾಗುತ್ತಿದೆ. ಈ ವಾಹನದಲ್ಲಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಟಕ್ಕೆ ಅನುಕೂಲವಾದ ವ್ಯವಸ್ಥೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಉತ್ಸವಗಳು, ಜಾತ್ರೆಗಳು ಧಾರ್ಮಿಕ ಸಮಾರಂಭಗಳು ನಡೆಯುವಲ್ಲಿಗೂ ಈ ಸಂಚಾರಿ ಸಾಹಿತ್ಯ ಸೌಲಭ್ಯವನ್ನು ವಿಸ್ತರಿಸಿ ಸಾಹಿತ್ಯಾಸಕ್ತರಿಗೆ ಶರಣರ ದರ್ಶನವನ್ನೂ ಪುಸ್ತಕಗಳ ಮೂಲಕ ಬೆಳೆಸುತ್ತಿದೆ.

**ಜೆ.ಎಸ್.ಎಸ್ ಬುಕ್‌ಹೌಸ್:**

* ಜೆ.ಎಸ್.ಎಸ್ ಪ್ರಕಟಣೆಗಳ ಮಾರಾಟ ಮಾಡುವ ಈ ಘಟಕವು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಟ್ಟಡದಲ್ಲಿದೆ. ಶ್ರೀಮಠದಲ್ಲೂ ಪುಸ್ತಕ ಮಾರಾಟ ವ್ಯವಸ್ಥೆ ಇದೆ.
* ವಿದ್ಯಾಪೀಠದ ಪ್ರಕಟಣೆಗಳಲ್ಲದೆ ಇತರ ಪ್ರಮುಖ ವೀರಶೈವ ಪ್ರಕಟಣಾಲಯಗಳ ಪುಸ್ತಕಗಳನ್ನು ಸಹ ಮಾರಾಟ ಮಾಡಲಾಗುತ್ತಿದೆ.
* ಮೈಸೂರು ನಗರದ ಪ್ರಖ್ಯಾತ ಪುಸ್ತಕ ಮಾರಾಟ ಮಳಿಗೆಯಾದ ಮೈಸೂರಿನ ಗೀತಾ ಬುಕ್ ಹೌಸಿನಲ್ಲಿ ಜೆ.ಎಸ್.ಎಸ್ ಪ್ರಕಟಣೆಗಳ ಒಂದು ಪ್ರತ್ಯೇಕ ವಿಭಾಗವನ್ನು ತೆರೆಯುವಷ್ಟು ಉತ್ಕೃಷ್ಠವಾಗಿ ಬೆಳೆದಿದೆ.
* ಪುಸ್ತಕಗಳಲ್ಲದೆ, ಕ್ಯಾಸೆಟ್‌ಗಳು, ಸಿಡಿಗಳು, ಧಾರ್ಮಿಕ ಸ್ಮರಣೆಗಳು ಕೂಡ ಮಾರಾಟಕ್ಕಿಟ್ಟಿದ್ದಾರೆ.
* ಇದರ ಜೊತೆಗೆ ಸಂಚಾರಿ ಮಾರಾಟ ಮಳಿಗೆ ವ್ಯವಸ್ಥೆ ಕಲ್ಪಿಸಿದ್ದಾರೆ.
* ಜಾತ್ರಾ ಮತ್ತು ಜಯಂತಿ ಸಂದರ್ಭಗಳಲ್ಲಿ ಶ್ರೀ ಮಠದ ಪ್ರಕಟಣೆಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಮೂಲಕ ಪುಸ್ತಕ ಪ್ರೇಮಿಗಳನ್ನು ತನ್ನತ್ತ ಸೇಳೆಯುತ್ತದೆ.

ಸಂಸ್ಥೆಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಶಾಲಾಕಾಲೇಜುಗಳಲ್ಲಿ ಪ್ರತಿವರ್ಷ ವಿದ್ಯಾರ್ಥಿಗಳ ಪ್ರತಿಭಾ ಅನ್ವೇಷಣೆಗಾಗಿ ಕಾಲೇಜುಗಳಲ್ಲಿ ವಾರ್ಷಿಕಸಂಚಿಕೆಗಳನ್ನು ಪ್ರಕಟಿಸಲು ಅನುವು ಮಾಡಿಕೊಡಲಾಗಿದೆ. ಅಲ್ಲದೆ ಪ್ರತಿವರ್ಷ ಉತ್ಕೃಷ್ಟವಾಗಿರುವ ವಾರ್ಷಿಕ ಸಂಚಿಕೆಗೆ ಶ್ರೀಮಠದ ವಿದ್ಯಾಪೀಠದ ವತಿಯಿಂದ ಮೂರು ರೀತಿಯ ನಗದು ಬಹುಮಾನ ನೀಡುತ್ತ ಬಂದಿದೆ ನಾಲ್ಕು ವಿಭಾಗಗಳಿಗೆ ೧.ವೈದ್ಯಕೀಯ ವಿಭಾಗ ೨. ಪದವಿ ವಿಭಾಗ ೩. ಪದವಿ ಪೂರ್ವ ವಿಭಾಗ ಮತ್ತು ೪. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗ. ಪ್ರತಿ ವಿಭಾಗಗಳಿಗೂ ಮೊದಲ ಬಹುಮಾನ-ರೂ.೨೦೦೦. ಎರಡನೆಯ ಬಹುಮಾನ ರೂ.೧೫೦೦. ಸಮಾಧಾನಕರ ಬಹುಮಾನ ರೂ.೧೦೦೦. ಈ ಬಹುಮಾನವನ್ನು ಪರಮಪೂಜ್ಯ ಜಗದ್ಗುರು ಡಾ.ಶ್ರೀಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳ ಜಯಂತ್ಯುತ್ಸವದ ಸಂದರ್ಭದಲ್ಲಿ ಪ್ರಧಾನ ಮಾಡಲಾಗುತ್ತದೆ.

**ಶ್ರೀಮಠದ ವತಿಯಿಂದ ಹೊರಬುತ್ತಿರುವ ಮಾಸಿಕ ದ್ವೈಮಾಸಿಕ ವಾರ್ಷಿಕ ಪತ್ರಿಕೆಗಳು.**

* **ಜೆ.ಎಸ್.ಎಸ್ ಮಾಸಪತ್ರಿಕೆ :** ಇದು ಜೆಎಸ್ಎಸ್ ಮಹಾವಿದ್ಯಾ ಪೀಠದ ವಾರ್ತಾ ಪತ್ರ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಸಂಸ್ಥೆಗಳ ಮತ್ತು ಶ್ರೀಮಠದ ಚಟುವಟಿಗಳ ಇದರಲ್ಲಿ ವರದಿಯಾಗುತ್ತಿವೆ ಪ್ರತಿಮೆಗಳು ೧೦೦೦ ಪ್ರತಿ ತಿಂಗಳು ಮುದ್ರಣವಾಗಿ ವಿದ್ಯಾಪೀಠದ ಅಂಗ ಸಂಸ್ಥೆಗಳಿಗೆ, ವಿವಿಧ ಸಂಘ ಸಂಸ್ಥೆಗಳಿಗೆ, ಶ್ರೀಮಠದ ಭಕ್ತರಿಗೆ ಉಚಿತವಾಗಿ ಕಳುಹಿಸಿಕೊಡಲಾಗುತ್ತಿದೆ. ಇದು ಪೂಜ್ಯ ಶ್ರೀಗಳ ಅಧ್ಯಕ್ಷತೆಯಲ್ಲಿ ಸಹಾ ಸಂಪ್ರಾದಕ ಮಂಡಳಿ ಮೂಲಕ ಹೊರಬರುತ್ತದೆ.

**'ಪ್ರಸಾದ' ದ್ವೈಮಾಸಿಕ :-** ವೀರಶೈವ ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಕುರಿತಂತೆ ವಿಚಾರಪೂರ್ಣ ಲೇಖನಗಳನ್ನೊಳಗೊಂಡ 'ಪ್ರಸಾದ'ದ್ವೈಮಾಸಿಕ' ಕಳದೆ ೨೫ ವರ್ಷಗಳಿಂದ ಪ್ರಕಟವಾಗುತ್ತಿದೆ ಪ್ರಸ್ತುತ ಮಲೆಯೂರು ಗುರುಸ್ವಾಮಿಯವರ ಸಂಪಾದಕತ್ವದಲ್ಲಿ ಶರಣ ತತ್ವದ ಬೆಳಕು ಚಲ್ಲುತ್ತಿದೆ. ಈ ಪತ್ರಿಕೆಗೆ ಇಂದು ೬೩೦೦ ಅಜೀವ ಸದಸ್ಯರುಗಳಿದ್ದಾರೆ ಹಳೆಯ ಪ್ರಸಾದ ಸಂಚಿಕೆಗಳನ್ನು ಒಟ್ಟು ಸಂಪುಟವಾಗಿಸಿದ 'ಪ್ರಸಾದ ಸಂಪದ" ಗ್ರಂಥ ಬಿಡುಗಡೆಯಾಗಿದೆ.

**ಶರಣಪಥ:-** ಕನ್ನಡೇತರರಿಗೆ ಮತ್ತು ವಿದೇಶಿಯರಿಗೆ ಶರಣ ದರ್ಶನ, ಸಾಹಿತ್ಯ ಹಾಗೂ ತೌಲನಿಕ ಧಾರ್ಮಿಕ ಹಾಗೂ ಸಾಹಿತ್ಯಕ ವಿಶ್ಲೇಷಣೆಗಾಗಿ ಮೀಸಲಾಗಿರುವ ಅರ್ಧವಾರ್ಷಿಕ ಪತ್ರಿಕೆ ಪ್ರತಿ ಜೂನ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಪ್ರಕಟವಾಗುತ್ತಿದೆ. ಈ ಇಂಗ್ಲೀಷ್ ಪತ್ರಿಕೆಯ ಸಂಪಾದಕರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಪ್ರೋ. ಸಿ.ನಾಗಣ್ಣನವರು. ಕಳೆದ ಹನ್ನೊಂದು ವರ್ಷಗಳಿಂದ ಪ್ರಕಟವಾಗುತ್ತಿರುವ ಈ ಪತ್ರಿಕೆಗೆ ೩೩೪೫ಕ್ಕಿಂತಲೂ ಹೆಚ್ಚು ಜನ ಚಂದಾದಾರರಿದ್ದಾರೆ. ಈ ಆಂಗ್ಲ ಅರ್ಧವಾರ್ಷಿಕ ಪತ್ರಿಕೆಯಾದ 'ಶರಣಪಥ' ಮತ್ತು 'ಪ್ರಸಾದ' ಪತ್ರಿಕೆಗಳನ್ನು ಅಂತರಾಜಾಲ (ವೆಬ್‌ಸೈಟ್)ದಲ್ಲೂಯೂ ನೋಡಬಹುದಾಗಿದಿದೆ. ಇದಲ್ಲದೆ ಶ್ರೀಮಠದ ವತಿಯಿಂದ ನಡೆಯುವ ಜ್ಞಾನದಾಸೋಹ ಉಪನ್ಯಾಸ ಮಾಲಿಕೆಗಳ, ಪ್ರವಚನ ಮಾಲಿಕೆಗಳ ಭಾಷಣವನ್ನು 'ಸಂಯಮ ಮತ್ತು ಸಿದ್ಧಿ" ಎಂಬ ಹೆಸರಿನಲ್ಲಿ ಪ್ರಕಟಸಲಾಗಿದೆ.

**ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು** : ೧೯೮೫ ರಲ್ಲಿ ಡಾ.ರಾಜೇಂದ್ರ ಮಹಾಸ್ವಾಮಿಗಳ ಕಲ್ಪನೆಯಕೂಸಾಗಿ ಹುಟ್ಟಿದ ಈ ಪರಿಷತ್ತು ಕಲೆ,ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಜಾನಪದ ಸಂರಕ್ಷಣೆ, ಸಂಶೋಧನೆ, ಸಂವರ್ಧನೆ ಮತ್ತು ಪ್ರಸಾರ ಕಾರ್ಯ ಆರಂಭಿಸಿತು. ಇದರ ವತಿಯಿಂದ

ಎಂಟು ಸಮ್ಮೇಳನಗಳು ನಡೆದು ಧತ್ತಿನಿಧಿ ಉಪನ್ಯಾಸಗಳು, ಪ್ರಕಟಣೆಗಳು, ಮಹಾಮನೆ, ಕದಳಿ ಪತ್ರಿಕೆ ಪ್ರಕಟಣೆ, ಮತ್ತು ಮಹಿಳಾ ಘಟಕಗಳ ಮೂಲಕ ಸಕ್ರಿಯಾವಾಗಿದೆ.

**ವಸ್ತು ಸಂಗ್ರಹಾಲಯ:** ಶ್ರೀ ಮಠದ ವತಿಯಿಂದ ಸುತ್ತೂರಿನಲ್ಲಿ ವಸ್ತು ಸಂಗ್ರಹಾಲಯವನ್ನು ತೆರೆಯಲಾಗಿದ್ದು, ಅಲ್ಲಿ ನೂರಾರು ತಾಳೆಯೋಲೆಗಳನ್ನು ಸಂಗ್ರಹಿಸಿ ಇಡಲಾಗಿದೆ. ಶ್ರೀಮಠದ ಹಿಂದಿನ ಸಭೆ ಸಮಾರಂಭದ ಪುಸ್ತಕ, ಸಿಡಿ, ಪೋಟೋ ಸಂಗ್ರಹಿಸಿ ಶೇಖರಿಸಲಾಗಿದೆ. ಅಲ್ಲದೆ ಹಿಂದಿನ ಗುರುಗಳು ಉಪಯೋಗಿಸುತ್ತಿದ್ದ ಪೂಜಾ ಸಾಮಾಗ್ರಿಗಳು, ಮಂತ್ರ ಮಹರ್ಷಿಗಳ ಮಂತ್ರ ಲೇಖನದ ಕೈಬರಹದ ಹೊತ್ತಿಗೆಗಳು, ಮಠದ ಪೂಜಾಸಾಮಾಗ್ರಿಗಳು ಇನ್ನೂ ಮುಂತಾದ ಸಂಗ್ರಹಗಳನ್ನು ಕಣಬಹುದು.

**ಪತ್ರಾಗಾರ ಇಲಾಖೆ :** ಸುತ್ತೂರು ಶ್ರೀ ಮಠದಲ್ಲಿ ಪರಂಪರಾಗತವಾಗಿ ಲಭ್ಯವಿರುವ ವಸ್ತುಗಳು ಮತ್ತು ಕಡತಗಳನ್ನು ಮುಂದಿನ ಜನಾಂಗದ ಉಪಯೋಗಕ್ಕಾಗಿ ಸಂರಕ್ಷಿಸುವ ಸಲುವಾಗಿ ೨೦೦೬ರಲ್ಲಿ ಶ್ರೀಮಠದಲ್ಲಿ ಪತ್ರಾಗಾರಶಾಖೆಯನ್ನು ಪ್ರಾರಂಭಿಸಿತು. ಇಲ್ಲಿ ತಾಳೆಗರಿಗಳ ಸಂಗ್ರಹ, ಮುದ್ರಣ ಕಾರ್ಯ, ಹಿಂದಿನ ಜಗದ್ಗುರುಗಳ ಪತ್ರವ್ಯವಹಾರಗಳು ಮಠದ ಆಸ್ತಿಪಾಸ್ತಿಗಳ ಲೆಕ್ಕಪತ್ರಗಳು, ಆಯವ್ಯಯ ಪುಸ್ತಕಗಳು, ಜಯಂತಿಜಾತ್ರೆ ಮುಂತಾದ ಸಮಾರಂಭಗಳ ಪತ್ರಗಳ ಪೋಟೋ, ವಿಡಿಯೋ ಮುಂತಾದ ದಾಖಲಾತಿಗಳನ್ನು ಸಂಗ್ರಹಿಸಿ ಸಂರಕ್ಷಿಸುವ ಕೆಲಸವನ್ನು ಇಲ್ಲಿ ಮಾಡಲಾಗುತ್ತಿದೆ. ಶ್ರೀಮಠವನ್ನು ಕುರಿತಾದ ಸಾಕ್ಷ್ಯ ಚಿತ್ರಗಳನ್ನೂ ಇತ್ತೀಚಿಗೆ ಸಿದ್ಧಪಡಿಸಲಾಗಿದೆ. ಹೀಗೆ ಮೈಸೂರು ಪ್ರಾಂತ್ಯದಲ್ಲಿ ಅಷ್ಟೇಅಲ್ಲದೆ ಇಡೀ ಕರ್ನಾಟಕದ ಸಾಹಿತ್ಯ ಮತ್ತು ಶೈಕ್ಷಣಿಕ ಸೇವೆಯಲ್ಲಿ ಶ್ರೀ ಸುತ್ತೂರು ಮಠಕ್ಕೆ ಸುತ್ತೂರು ಮಠವೇ ಸಾಟಿಯಾಗಿ ಜ್ಞಾನ ದಾಸೋಹಕಾರ್ಯ, ಅಕ್ಷರ, ಅನ್ನ ದಾಸೋಹ ಕಾರ್ಯ ನಿರಂತರವಾಗಿ ನಡೆಸುತ್ತ ಇಂದಿನ ಮುಂದಿನ ಪೀಳಿಗೆಗೆ ಮಾದರಿಯಾಗಿದೆ.

**ಸಾಹಿತ್ಯ ಸೇವೆಯಲ್ಲಿ ದೇವನೂರು ಶ್ರೀಮಠ :**

"ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠವು ಸಾಹಿತ್ಯಕ ಕ್ಷೇತಕ್ಕೆ ತನ್ನದೆ ಆದ ಕೊಡುಗೆಯನ್ನು ನೀಡಿದೆ,ಈಗಲೂ ನೀಡುತ್ತದೆ. ಶ್ರೀ ಮಠವು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಅವಲೋಕನ ಮಾಡಿ ನೋಡಿದಾಗ ಮುಖ್ಯವಾಗಿ ಮಹಾತ್ಮ ಶ್ರೀ ಗುರುಮಲ್ಲೇಶ್ವರರೇ ಸ್ವತಃ ಭಜನೆಗಳನ್ನು ರಚಿಸಿ ಹಾಡುತ್ತಿದ್ದರು ಎಂಬುದು ಕಂಡುಬರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಅವರು ಹಾಡುತ್ತಿದ್ದ ಮಾಡಿದನೆನ್ನ ಫಕೀರನ ಸದ್ಗುರು... ಹಾಗೂ ಜ್ಞಪ್ತಿ ಚಿದ್ಬಯಲನೆ ಸೇರು ಕಂಡ್ಯಾ. . . . ಹಾಡುಗಳಿನ್ನೂ ನಾವು ಗಮನಿಸಬಹುದಾಗಿದೆ. ಇದಲ್ಲದೆ ಗುರುಮಲ್ಲೇಶ್ವರರು ಅಷ್ಟಾವರಣ, ಪಂಚಾಚಾರಗಳು ಇತ್ಯಾದಿ ವಿಷಯಗಳ ಬಗೆಗೆ ಸಾಹಿತ್ಯ

ರಚಿಸಿರುವುದು ಬೆಳಕಿಗೆ ಬಂದಿದೆ. ಇದಲ್ಲದೆ ಶ್ರೀಮಠದ ಗುರುಪರಂಪರೆಯಲ್ಲಿ ಬಂದಂತಹ ಕೆಲವು ಪೂಜ್ಯರುಗಳು ಸಾಹಿತ್ಯ ಸಂಪಾದನೆ, ರಚನೆ ಮತ್ತು ಪ್ರಕಟಣಾ ಕಾರ್ಯದಲ್ಲಿ ತೊಡಗಿದ್ದನ್ನು ಹಾಗೂ ಪ್ರಸ್ತುತ ಪ್ರಕಟಿಸುತ್ತಿರುವುದನ್ನು ನಾವು ಇಂದಿಗೂ ಶ್ರೀಮಠದಲ್ಲಿ ಕಾಣಬಹುದು."[೧೭]

ಶ್ರೀಗುರುಭಿಕ್ಷದಾರ್ಯರ ಕರಕಮಲಸಂಜಾತರು ಹಾಗೂ ಶ್ರೀಮಠದ ಅದಿಪತಿಗಳು ಆಗಿದ್ದ ಪೂಜ್ಯ ಶ್ರೀಗಳಾದ ಲಿಂಗೈಕ್ಯ ಶಿವಬಸವಸ್ವಾಮಿಗಳವರು ತಮ್ಮ ಜೀವಿತಾವಧಿ ಕಾಲದಲ್ಲಿ ಹಳೆಯ ಕಾಲದ ಅನೇಕ ಗ್ರಂಥಗಳನ್ನೂ ಸಂಪಾದಿಸಿ ಶ್ರೀಗುರುಮಲ್ಲೇಶ್ವರ ಗ್ರಂಥರತ್ನಮಾಲಾ ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಿಸಿದ್ದಾರೆ. ಅವರು ಸಂಪಾದಿಸಿ ಪ್ರಕಟಿಸಿರುವ ಪ್ರಮುಖ ಗ್ರಂಥಗಳಾವುವೆಂದರೆ,

೧. ಚನ್ನಪ್ಪ ಕವಿಕೃತ ಶರಣಲೀಲಾಮೃತ ಅಥವಾ ಯಕ್ಷಗಾನ ಬಸವ ಪುರಾಣ(೧೯೪೫)

೨. ನಾನಾ ಕವಿಗಳ ಕೃತ ಬಸವ, ಚನ್ನ ಬಸವಾದಿ ಶರಣರ ಕಾಲಜ್ಞಾನ ಸಂಗ್ರಹ (೧೯೪೬)

೩. ಸೊನ್ನಾಲಪುರದ ಸಿದ್ಧಾರಾಮಕೃತ – ಬಸವ ಸ್ತೋತ್ರಗೀತೆ, ಮಿಶ್ರ ಸ್ತೋತ್ರ ಗೀತೆ ಅಷ್ಟಾವರಣ ಸ್ತೋತ್ರ (ಮೂರು ಒಂದರಲ್ಲಿ ಇವೆ) (೧೯೫೪)

೪. ನಂಜುಂಡ ಕವಿಕೃತ–'ಬೈರವೇಶ್ವರ ಕಾವ್ಯ' (೧೯೫೫)

ಶ್ರೀಮಠದ ಗುರುಪರಂಪರೆಯ ಮತ್ತೋಬ್ಬ ಪೂಜ್ಯರಾದ ಲಿಂಗೈಕ್ಯ ಶ್ರೀ.ನಿ.ಪ್ರ.ಸ್ವ. ಶ್ರೀ ಬಸವಣ್ಣ ಸ್ವಾಮಿಗಳವರು ಒಬ್ಬ ಆಶುಕವಿಗಳು, ನಾಟಕಕಾರರು ಹಾಗೂ ಸಾಹಿತಿಗಳು ಸಹ ಆಗಿದ್ದವರು. ಶ್ರೀಗುರುಮಲ್ಲೇಶ್ವರರು ಹಾಗೂ ಅವರ ನೆಚ್ಚಿನ ಗುರುಗಳಾದ ಶ್ರೀ ಶಿವಪ್ಪಸ್ವಾಮಿಗಳವರನ್ನೂ ಕುರಿತಾದ 'ಶ್ರೀಗುರುಶಿವೇಶ ಭಜನಾಮೃತ'(೫) ಎಂಬ ಭಜನಾ ಹಾಡುಗಳನ್ನೂ ರಚಿಸಿ ಪ್ರಕಟಿಸಿದ್ದಾರೆ. ಅಲ್ಲದೆ 'ಮಹಾತ್ಮ ಶ್ರೀ ಗುರುಮಲ್ಲೇಶ್ವರರು ಹಾಗೂ ಶ್ರೀ ಗುರು ಪರಂಪರೆ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಇದು ೧೯೭೩ರಲ್ಲಿ ನಡೆದ ಶ್ರೀ ಗುರುಮಲ್ಲೇಶ್ವರಂ ವಜ್ರಮಹೋತ್ಸವ ಹಾಗೂ ಶ್ರೀಭಿಕ್ಷಾದಾರ್ಯ ಸ್ವಾಮಿಗಳವರ ಹಾಗೂ ಶ್ರೀ ಗುರುತೋಂಟದಾರ್ಯ ಸ್ವಾಮಿಗಳವರ ಗದ್ದುಗೆಗಳ ನೂತನ ಗೋಪುರಗಳ ಸುವರ್ಣ ಕಳಶಾರೋಹಣ ಮಹೋತ್ಸವಗಳಂದು ಶ್ರೀಮಠದ ವತಿಯಿಂದ ಈ ಕೃತಿ ಪ್ರಕಟಗೊಂಡಿದೆ. ಇವುಗಳಲ್ಲದೆ ಶ್ರೀಗಳವರು 'ಶ್ರೀಬಸವೇಶ್ವರವಿಜಯ,ಭಿಕ್ಷಟನಾಲೀಲೆ, ಶ್ರೀಸದಾನಂದ ಗಣೇಶನಲೀಲೆ, ಅಂಧಕಾಸುರಲೀಲೆ ಇನ್ನೂ ಮುಂತಾದ ನಾಟಕಗಳನ್ನೂ ಶ್ರೀಗಳು ರಚಿಸಿದ್ದಾರೆ. ಇವುಗಳೆಲ್ಲ ಮೂಲ ಪ್ರತಿಯಲ್ಲೇ ಇದ್ದು ಪ್ರಕಟಣೆಗೊಳ್ಳಬೇಕಾದೆ.

---

೧೭. ನಿರಂಜನ : ಸಂ.ಬಿ.ನಂ ಚಂದಯ್ಯ ಲೇ.ಬಸವರಾಜು ಪುಟ – ೧೬೫–೧೬೬

ಇವುಗಳಲ್ಲದೆ ಶ್ರೀಮಠವು ಹಾಗೂ ಶ್ರೀಮಠದ ಕೆಲವು ಭಿಕ್ಷದ ಶಾಖಾ ಮಠಗಳ ಶ್ರೀಗಳವರು ಇನ್ನೂ ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ

೧. ತೋಂಟದಾರ್ಯ ಸ್ವಾಮಿಯವರ ಚರಿತ್ರೆ ಬಿ.ಪುಟ್ಟಮಲ್ಲಪ್ಪ, ದೊಡ್ಡಿಂದುವಾಡಿ –೧೯೫೬

೨. 'ದಾಸೋಹಂ' – ಶ್ರೀ ಗುರುಮಲ್ಲೇಶ್ವರ ವಜ್ರಮಹೋತ್ಸವದ ಸ್ಮರಣ ಸಂಚಿಕೆ ಸಂಪಾದಕರು. ಲಿಂ.ವಿದ್ವಾನ್ ಶಿವರುದ್ರಸ್ವಾಮಿಗಳವರು ಕಾಗಲವಾಡಿಮಠ–೧೯೭೩

೩. ಶ್ರೀಗುರುಮಲ್ಲೇಶ್ವರ ಸುಪ್ರಭಾತ ಮತ್ತು ಗುರುಪರಂಪರೆ.ದಿ. ಪಂಡಿತ ಕೆ.ಪಿ.ಶಿವಲಿಂಗಯ್ಯ –೧೯೭೭

೪. ಶ್ರೀ ಗುರುಮಲ್ಲೇಶ್ವರ ತ್ರಿವಿಧಿ. ಲೇಖಕರು ದಿ.ಹೆಜ್ಜಿಗೆ ಲಿಂಗಣ್ಣ (೧೯೭೭)

೫. ಶ್ರೀಗುರುಮಲ್ಲೇಶ್ವರ ಸ್ವಲೀಲಾಮೃತ ಲಿಂ. ಶ್ರೀ ಪುಟ್ಟಬಸಪ್ಪ ಸ್ವಾಮಿಗಳು ದೊಡ್ಡಭೂವಳ್ಳಿಮಠ ಮಳವಳ್ಳಿ ತಾ. – ೧೯೭೬

೬. ಚನ್ನಪ್ಪಕವೀಕೃತ ಶರಣಲೀಲಾಮೃತ ಅಥವಾ ಯಕ್ಷಗಾನಬಸವಪುರಾಣ(ದ್ವಿತೀಯ ಮುದ್ರಣ)ಸಂಪಾದಕರು : ಲಿಂ ಶಿವಬಸವ ಸ್ವಾಮಿಗಳು ದೇವನೂರು ಮಠ–೧೯೯೦

೭. ಮಹಾತ್ಮ ಗುರುಮಲ್ಲೇಶ್ವರರು – ಡಿ.ಎಂ.ಮಹಾದೇವ ಮೂರ್ತಿ

೮. ಗುರುಮಲ್ಲೇಶ್ವರ ಮಹಾತ್ಮ–ಹೊಂಡರಬಾಳು ಲಿಂಗರಾಜೇ ಅರಸ್

"ಶಿವಬಸವಸ್ವಾಮಿಗಳು ಸಂಪಾದಿಸಿದ ಶರಣಲೀಲಾಮೃತ/ಬಸವಪುರಾಣದಲ್ಲಿ ದೇವನೂರು ಮಠದ ಶ್ರೀಗಳು ಅನೇಕ ಹಸ್ತಪ್ರತಿಗಳ ಸಹಾಯದಿಂದ ೨೫ ಸಂಧಿಗಳಲ್ಲಿ ಈ ಯಕ್ಷಗಾನ ಕಾವ್ಯವನ್ನು ಪರಿಷ್ಕರಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಗ್ರಂಥವು ಹಾಡುಗಬ್ಬವಾಗಿದೆ. ಇದರಲ್ಲಿ ವರ್ಣಕಗಳಾದ ದ್ವಿಪದಿ, ತ್ರಿಪದಿ, ಷಟ್ಪದಿ, ತ್ರಿವುಡೆ ಹಾಗೂ ಕಂದ, ವೃತ್ತಗಳು ಅಡಕವಾಗಿವೆ. ತತ್ವವಿವೇಚನೆಯಲ್ಲಿಯೂ ಕೆಳ್ವಿಕೆಯ ಸೊಂಪಿನಲ್ಲಿಯೂ ಇಂಪಾಗಿ ರಚಿಸಿರುವುದರಿಂದ ಯಕ್ಷಗಾನ ಗ್ರಂಥರಚನರಯಲ್ಲಿ ಇದೇ ಮೊದಲನೆಯದೆಂದು ಹೇಳಬಹುದು. ಶರಣರ ವೈರಾಗ್ಯ ಮಾಯಾವಿಡಂಬನೆ, ಜನತೆಯ ಉದ್ಧಾರ, ಆಧ್ಯತ್ಮಿಕ ತತ್ವಗಳ ತಿಳಿಯಾದ, ಸೂಕ್ಷ್ಮವಾದ ವಿಚಾರ ಮುಂತಾದವುಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಬಸವಣ್ಣನವರ ಬದುಕನ್ನು ತಿಳಿಸುತ್ತಲೆ ಚಿತ್ರಿಸಲಾಗಿದೆ."[೧೮]

ಹೀಗೆ ಸಾಹಿತ್ಯ ಸೇವೆಯಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಅನ್ನ, ಅಕ್ಷರ, ಜ್ಞಾನ ದಾಸೋಹದ ಜೊತೆಗೆ ಸಾಹಿತ್ಯ ದಾಸೋಹವನ್ನು ಉಣಬಡಿಸುತ್ತಿದೆ. ಇದಕ್ಕೆ ಬೆನ್ನೆಲುಬಾಗಿ ನಿಂತಿರುವವರು ಶ್ರೀಮಠದ ಹಿಂದಿನ ಹಾಗೂ ಇಂದಿನ ಶ್ರೀಗಳಾದ ಶ್ರೀ ಮಹಂತ ಸ್ವಾಮಿಗಳವರು.

---

೧೮ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವೀರಶೈವ ಸಾಹಿತ್ಯ ಪುಟ ೧೦೧, ೧೨೫

**ಸಾಹಿತ್ಯ ಸಾರಸ್ವತಲೋಕದಲ್ಲಿ ಶ್ರೀ ಹೊಸಮಠ:**

ಶ್ರೀ ಹೊಸಮಠದ ಪರಂಪರೆಯಲ್ಲಿ ಸಾಗಿಬಂದ ಅನೇಕ ಕರ್ತೃಗಳು ವ್ಯಾಕರಣಾದಿ ಶಾಸ್ತ್ರಗಳಲ್ಲಿಯೂ ಧಾರ್ಮಿಕ ವಿಚಾರಗಲ್ಲಿಯೂ, ಧಾರ್ಶನಿಕ ವಿದ್ವತ್ತಿನಲ್ಲಿಯೂ ಮಹಾವಿದ್ವಾಂಸರುಗಳೇ ಆಗಿದ್ದರು. ಹಾಗೆಯೇ ಅನೇಕಾನೇಕ ಗ್ರಂಥಗಳನ್ನು ಸಹ ರಚಿಸಿರುವುದು ಕಂಡುಬರುತ್ತದೆ.

ಅಷ್ಟಲ್ಲದೆ ಪ್ರಕಾಶನ ಕಾರ್ಯವನ್ನು ಸಹ ಕೈಗೊಂಡಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳು ಸ್ವಯಂ ಮಹಾವಿದ್ವಾಂಸರು ಆಗಿದ್ದರಲ್ಲದೆ ಅನೇಕ ಶಿಷ್ಯ ವೃಂದವನ್ನು ಹೊಂದಿದ್ದರು. ಇವರು ರಾಚೋಟಿದೇವರು, ಮರಿದೇವರು, ರುದ್ರದೇವರು, ಸಿದ್ಧಲಿಂಗದೇವರು, ಗುರುಶಾಂತದೇವರು, ಗುರುನಂಜದೇವರು, ಗುರುಪಾದ ದೇವರು ಮೊದಲಾದ ಘನವಿದ್ವಾಂಸರುಗಳ ವಿರಕ್ತ ಗುರು ಸಮುದಾಯಕ್ಕೆ ವಿದ್ಯಾಗುರುಗಳು, ಅನಿಗ್ರಹ ಗುರುಗಳು ಆಗಿದ್ದರು ಈ ಪರಂಪರೆಯಲ್ಲಿಯೇ ಶ್ರೀ ಗುರುಮಲ್ಲ ಸ್ವಾಮಿಗಳು ಆಗಿಹೋಗಿದ್ದಾರೆ. ಈಗೆ ಶ್ರೀಮಠವು ಅನೇಕ ಘನ ವಿದ್ವಾಂಸ ವಿರಕ್ತ ಗುರುಗಳನ್ನೂ ಲಿಂಗವಂತ ಧರ್ಮ ಸಮಾಜಕ್ಕೆ ಕೊಡುಗೆ ನೀಡುತ್ತಿರುತ್ತದೆ. ವೀರಶೈವ ವಾಙ್ಮಯದ ಆದ್ಯ ಪ್ರಕಾಶರುಗಳ ಶ್ರೀಹೊಸಮಠವು ಒಂದು ಈ ಶ್ರೀಮಠದ ಬಸವಲಿಂಗ ಸ್ವಾಮಿಗಳು ತಮ್ಮದೇ ಆದಾಂತಹ ಸಾಹಿತ್ಯ ಕೊಡುಗೆ ನೀಡಿದ್ದಾರೆ.

**ಶಿವಪೂಜಾ ಶಿವಲಿಂಗ ಶಿವಯೋಗೀಂದ್ರರು (ಸುಮಾರು -೧೬೦೦)**

ಶ್ರೀಗಳು ಶ್ರೀಹೊಸಮಠದ ನಾಲ್ಕನೇ ಅಧ್ಯಕ್ಷರಾಗಿ ಬಾಳಿದರೆಂಬುದನ್ನು ಸ್ವತಃ ಅವರೇ ರಚಿಸಿರುವ 'ಶ್ರುತಿ ಸಾರಭಾಷ್ಯ"ದಿಂದ ತಿಳಿಯಬಹುದು. ಇವರು ಗ್ರಂಥದ ಅಂತ್ಯದಲ್ಲಿ ತಮ್ಮ ಗುರುಪರಂಪರೆಯನ್ನೂ ಹೇಳುತ್ತಾ ತಾವು ಶ್ರೀಗುರುಕುಮಾರದೇಶಿಕರಶಿಷ್ಯರೆಂದು ತಿಳಿಸಿದ್ದಾರೆ. "ಈ ಗ್ರಂಥದ ಹೆಸರೇ ಸೂಚಿಸುವಂತೆ ಪ್ರಮುಖವಾದ ಎಪ್ಪತ್ತೈದು ವೇದಮಂತ್ರಗಳಿಗೆ ವೀರಶೈವ ಸಿದ್ಧಾಂತ ಪರವಾದ ಭಾಷ್ಯವನ್ನು ಶ್ರುತಿ-ಸ್ಮೃತಿ-ಪುರಾಣಗಳ ಆಧಾರದ ಮೇಲೆ ರಚಿಸಿದ್ದಾರೆ. ಕೃತಿಯ ಅಂತ್ಯದಲ್ಲಿ ತಮ್ಮನ್ನು ಪುತ್ಯಗ್ರ ಮಠಾಧ್ಯಕ್ಷೇಣ [ಪ್ರತ್ಯಗ್ರಹೊಸ] ಎಂದು ಸಂಬೋದಿಸಿ ಕೊಂಡಿರುವುದರಿಂದ ಹೊಸದಾಗಿ ಮಠವನ್ನು ಕಟ್ಟಿದ ತರುವಾಯ ಇವರ ಇದರ ಅಧಿಪತಿಗಳಾಗಿದ್ದಾರೆ ಎಂಬುದು ತಿಳಿದುಬರುತ್ತದೆ."[೧೯]

---

೧೯. ಮೈಸೂರು ಮತ್ತು ಚಾ.ನಗರ ಜಿಲ್ಲಾ ವೀರಶೈವ ಸಾಹಿತ್ಯ ಸಂ ಎಚ್.ಟಿ.ಶೈಲಜಾ ಲೇ.ವಿದ್ವಾನ್ ಡಾ.ಶ್ರೀ. ಇಮ್ಮಡಿ ಶಿವ ಬಸವ ಸ್ವಾಮಿಗಳು ಪುಟ- ೫೦

**ವಿದ್ವಾನ್ ಶ್ರೀ ಬಸವಲಿಂಗ ಸ್ವಾಮಿಗಳು**

"ಶ್ರೀಮಠದ ಚರಮೂರ್ತಿ ಶ್ರೀ ಬಸವಲಿಂಗಸ್ವಾಮಿಗಳು ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದು ಸ್ವಂತಃ ಕವಿಗಳು ವಾದಿ-ವಾಗ್ಮಿಗಳೂ ಗ್ರಂಥಸಂಪಾದಕ-ಪ್ರಕಾಶಕರು ಆಗಿದ್ದು ,ಹತ್ತಾರು ತಾತ್ವಿಕ ಗ್ರಂಥಗಳನ್ನು ಪ್ರಕಟಿಸಿ ವೀರಶೈವ ದಾರ್ಶನಿಕ ಸಾಹಿತ್ಯಕ್ಕೆ ಅಮೋಘ ಸೇವೆಯನ್ನು ಸಲ್ಲಿಸಿದ್ದು,ಶ್ರೀಮಠದ ಕೀರ್ತಿ ಪತಾಕೆ ಹಾರಿಸಿದ್ದಾರೆ. ಜೊತೆಗೆ ಶ್ರೀಮಠದಲ್ಲಿದ್ದ ಅತ್ಯಮೂಲ್ಯವಾದ ತಾಡೆ-ತಾಳೆಯೊಲೆಗಳ ಕಟ್ಟುಗಳು, ಹಸ್ತಪ್ರತಿಗಳಗಂಟುಗಳು, ಪ್ರಾಚೀನ ಕಾವ್ಯ-ಶಾಸ್ತ್ರಗಳ ರಾಶಿಗಳು ಇವುಗಳನ್ನೊಳಗೊಂಡಂತಹ ಬೃಹತ್ ಗ್ರಂಥಭಂಡಾರವೆ ಇದ್ದುದರಿಂದ, ಗ್ರಂಥ ಸಂಶೋಧನೆ-ಸಂಪಾದನೆ ಪ್ರಕಟಣೆಗಳಲ್ಲೆ ಸದಾ ತಮ್ಮನ್ನ ತೊಡಗಿಸಿಕೊಂಡಿದ್ದರು. ಅಲ್ಲದೆ ಮಹತ್ವದ ಕೆಲವು ಗ್ರಂಥಗಳಿಗೆ ಕನ್ನಡದಲ್ಲಿ ಟೀಕೆ ಟಿಪ್ಪಣಿಗಳನ್ನು ಬರೆದು ಪ್ರಕಟಿಸಿ ವಿದ್ವಜ್ಜನರ ಮೆಚ್ಚುಗೆಯನ್ನು ಗಳಿಸಿದರು."[೨೦] ಪುಸ್ತಕ ಪ್ರಕಾಶನಕ್ಕೆ ಹಣಕಾಸಿನ ಸಂಕಷ್ಟದ ದಿನಗಳಲ್ಲಿ ವೀರಶೈವ ಸಾಹಿತ್ಯ ಸಂಸ್ಕೃತಿಗಳ ಪ್ರಚಾರ-ಪ್ರಕಾಶನಗಳಿಗಾಗಿಯೋ ತಮ್ಮನ್ನ ಸಂಪೂರ್ಣವಾಗಿ ತೊಡಗಿಸಿ ಕೊಂಡರು. ಜೊತೆಗೆ ಪ್ರಕಟಣೆಗೆ ನೆರವಾದ ನಾನಾ ಕಡೆಯ ವಿರಕ್ತ ಮಠಗಳ ಸ್ವಾಮಿಗಳನ್ನು ಆಯಾ ಗ್ರಂಥಗಳ ಮೊದಲಲ್ಲಿ ಕೃತಜ್ಞತೆಯಿಂದ ನೆನಪಿಸಿಕೊಂಡಿದ್ದಾರೆ. ಶ್ರೀಬಸವಲಿಂಗ ಸ್ವಾಮಿಗಳು ಸಂಪಾದಿಸಿ ಪ್ರಕಟಿಸಿರುವ ಹಲವಾರು ಗ್ರಂಥಗಳಿವೆ ಅವುಗಳಲ್ಲಿ ಕೆಲವನ್ನು ನಾವೆಲ್ಲಿ ಗಮನಿಸಬಹುದು

* **ಶಿವ ಪಂಚಸ್ತವ ಸವ್ಯಾಖ್ಯಾನ, ಸ್ವಟಿಪ್ಪಣಿ ಸಹಿತ** ೧೯೦೮
* **ವೇದ ಸಂಜೀವಿನಿ.** ಮುಮ್ಮಡಿ ಕರಿಯಕ್ಷಿತೀಂದ್ರ – ಕೃಷ್ಣಭೂಪಾಲ ಕೃತ ವಚನಾಗಮ ೧೯೦೯
* **ಪುರುಷ ಸೂಕ್ತಂ.** ನಿರಂಜನ ಜಂಗಮ ಪರವಾದ ಚನ್ನವೀರ ವ್ಯಾಖ್ಯಾನಸಹಿತ ೧೯೦೯
* **ಪರಮಾತ್ಮ ಪ್ರಕಾಶಿಕೆ** ಸೋಸಲೆ ರೇವಣಾರಾದ್ಯರ ಕೃತಿಗಳು ೧೯೧೧
* **ಸ್ವ ಸ್ವರೂಪ ಪ್ರಕಾಶಿಕೆ** ೧೯೧೧
* **ಶಿವಸ್ತವ ಶಿರೋಮಣಿ** ೧೯೧೧
* **ಶೃತಿಸಾರ ಭಾಷ್ಯಂ.** ಶಿವಪೂಜಾ ಶಿವಲಿಂಗ ದೇಶಿಕ ಕೃತ ೧೯೧೩
* **ವೀರಶೈವ ಷಟ್‌ಸ್ಥಲ ನಿರಾಭಾರಿ ಸಿದ್ಧಾಂತ** ೧೯೨೩
* **ಷಟ್‌ಸ್ಥಲ ಕೌಮುದೀ** ೧೯೨೩
* **ಶಿವಾದಿಕ್ಯ ರತ್ನಾವಳಿ.** ಷಡಕ್ಷರ ದೇವಕೃತ ೧೯೨೯
* **ಭಕ್ತಾಧಿಕ್ಯ ರತ್ನಾವಳಿ**

---

೨೦. ರಜತಕಿರಣ, ಪ್ರೊ.ಎಸ್.ನಂಜುಂಡಯ್ಯ, ಪು.೧೦

ಹೀಗೆ ಅನೇಕ ಗ್ರಂಥಗಳಿಗೆ ಕರ್ತೃಗಳಾಗಿ ಸಂಪದಾಕರಾಗಿ ಮತ್ತು ಪ್ರಕಾಶಕರಾಗಿ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. ಇವರ ಶ್ರೀಮುಂದಿನ ಗುರುಗಳಾದ ಶ್ರಿ.ನಿ.ಪ್ರ.ಸ್ವ ವಿದ್ವಾನ್ ಗುರುಶಾಂತಸ್ವಾಮಿಗಳು ವ್ಯಾಕರಣ ಪಂಡಿತರಾಗಿದ್ದ "ಇವರು ಮಾಡಿರುವ ಮತ್ತೊಂದು ಮಹತ್ಕಾರ್ಯವೆಂದರೆ ಸಂಸ್ಕೃತ ವ್ಯಾಕರಣ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿರುವುದು. ತಾವು ಕರಗತ ಮಾಡಿ ಕೊಂಡ ವಿದ್ಯೆ ಹಾಗೆಯೇ ತಮ್ಮ ಹಿಂದೆ ಹೋಗಬಾರದೆಂದು ತಿಳಿದು ಮಹಾಭಾಷ್ಯ ವೈಯಾಕರಣ ಭೂಷಣಸಾರ, ಪರಭಾಷೇಂದುಶೇಖರ, ಪರಮ ಲಘುಮಂಜೂಷ ಮೊದಲಾದ ಗ್ರಂಥಗಳನ್ನು ವ್ಯಾಕರಣ ಶಾಸ್ತ್ರಾಭ್ಯಾಸಿಗಳ ಅನುಕೂಲಕ್ಕಾಗಿ ಕನ್ನಡಕ್ಕೆ ಅನುವಾದಿಸಿ ಅದರ ಹಸ್ತ ಪ್ರತಿಗಳನ್ನು ಸಂಸ್ಕೃತ ಕಾಲೇಜಿನ ಗ್ರಂಥಭಂಡಾರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಮುಂದಿನ ಪೀಳಿಗೆಯ ಜನರ ಸುಲಭ ಅಧ್ಯಯನಕ್ಕಾಗಿ ಶ್ರೀಗಳ ಶ್ರಮ ಸಾರ್ಥಕವಾಗುವುದು ಅವುಗಳ ಪ್ರಕಾಶನ ಪ್ರಚಾರ ಆದಾಗಲೆ."[೨೧]

ಈ ರೀತಿ ಮೈಸೂರು ಪ್ರಾಂತ್ಯದಲ್ಲಿ ವೀರಶೈವ ಸಾಹಿತ್ಯಕ್ಕೆ ಶ್ರೃ ಹೊಸಮಠ ತನ್ನದೆ ಆದಂತಹ ಅಳಿಲು ಸೇವೆ ಸಲ್ಲಿಸುತ್ತಿದೆ. ಇತ್ತಿಚಿಗೆ ರಜತಕಿರಣ, ವಾತ್ಸಲ್ಯ ಮಾಸಪತ್ರಿಕೆ 'ನಟರಾಜ ಪ್ರತಿಷ್ಠಾನ" ಮುಂತಾದ ಕೃತಿಗಳನ್ನು ಪ್ರಕಟಿಸಿದೆ.

**ತಲಕಾಡು ಹಸ್ತಕೇರಿ ಮಠ:**

ನಮ್ಮ ನಾಡಿನ ಕೆಲವು ವೀರಶೈವಮಠಾಧೀಶರು, ಗುರುಗಳಷ್ಟೆ ಆಗಿರಲಿಲ್ಲ ಉತ್ತಮ ಸಂಶೋಧಕರು ಆಗಿದ್ದರು. ಅದಕ್ಕೆ ಸಾಕ್ಷಿ ಎನ್ನುವಂತೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡಿನಲ್ಲಿರುವ ಹಸ್ತಿಕೇರಿ ಮಠದ ಗುರುಗಳಾದ ಡಾ.ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ಸದಾ ಸಮಾಜಸೇವೆ ಸಾರ್ವಜನಿಕ ಕಲ್ಯಾಣದ ಆಸೆಯನ್ನು ಹೊಂದಿರುವ, ಇವರು ೧೯೬೦ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಮಠದ ಅಭಿವೃದ್ಧಿಯ ಜೊತೆಗೆ ಆಯುರ್ವೇದ, ಹೋಮಿಯೋಪತಿ ಹಾಗೂ ಹಳ್ಳಿ ಪದ್ಧತಿಯನ್ನು ಹೆಚ್ಚು ಹೆಚ್ಚು ಪ್ರಚಾರಕ್ಕೆ ತಂದರು. ತಮ್ಮ ಮಠಕ್ಕೆ ಬಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದಲ್ಲದೆ ರಾಜ್ಯದ ನಾನಾ ಭಾಗಗಳಲ್ಲಿ ಸುತ್ತಿ ವಿಷವೈದ್ಯ, ಪ್ರಕೃತಿ ಚಿಕಿತ್ಸೆ, ಯೋಗಾಸನ ಮತು ಆಯುರ್ವೇದ ಮೊದಲಾದ ವಿಷಯಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ಉಪನ್ಯಾಸ ನೀಡಿದ್ದಾರೆ. ಸ್ವತಃ ಕನ್ನಡದ ಎಂ.ಎ ಪದವಿದರಾಗಿರುವ ಶ್ರೀಗಳು ವಿಷಕಾರಿ ಕೀಟಗಳಾದ ಹಾವು, ಚೇಳು ಮುಂತಾದವುಗಳ ಕಡಿತಕ್ಕೆ

---

೨೧. ರಜತಕಿರಣ ಲೇ ಎಸ್. ನಂಜುಂಡಯ್ಯ ಪುಟ- ೧೫

ತಕ್ಷಣ ಚಿಕಿತ್ಸೆ ನೀಡಬಲ್ಲರು. ಅಲ್ಲದೆ ಇದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಬರೆದಿದ್ದಾರೆ. ೧. **"ಸರ್ಪ ವಿಷ ಜಂತು ಸ್ವಯಂ ಚಿಕಿತ್ಸೆ – ೧೯೭೭ ೨. ಹಾವಿನ ವಿಷ ಚಿಕಿತ್ಸೆ ೧೯೭೯. ೩.ಚೇಳಿನ ವಿಷ ಚಿಕಿತ್ಸೆ–೧೯೭೯,. ೪.ಸರ್ಪ ಸಂಸ್ಕೃತಿ, ೫.ಯಾತ್ರಾರ್ಥಿಯ ಹೃದಯಾಂತರಾಳದಿಂದ** ೧೯೮೨. ಎಂಬ ಹಲವಾರು ಪುಸ್ತಕಗಳ ರಚಿಸಿ ಪ್ರಕಟಿಸಿದ್ದಾರೆ. ಶಕ್ತಿದೇವತೆ ಹಾಗೂ ವೀರಶೈವಸಿದ್ಧಾಂತಕ್ಕೆ ಸಂಬಂಧಿಸಿದ ಸಿದ್ಧರಾಮ ಮತ್ತು ಬಸವಣ್ಣನವರು ರಚಿಸಿದ ಓಲರಗರಿಗಳು ಹಾಗೂ ಜೋತಿಷ್ಯಕ್ಕೆ ಸಂಬಂಧಿಸಿದ ಓಲೆಗರಿಗಳನ್ನೂ ಶ್ರೀಮಠದಲ್ಲಿ ಸಂಗ್ರಹಿಸಿಡಲಾಗಿದೆ. 'ಪಂಚಲಿಂಗ ಪ್ರಕೃತಿ ಆಯುರ್ವೇದ ಯೋಗ ಕುಟೀರ ವಿವಿಧ ಬಗೆಯ ಚಿಕಿತ್ಸಾ ವಿಧಾನಗಳು ಸಮನ್ವಯ ಚಿಕಿತ್ಸಾ ಕೈಪಿಡಿ ಮುಂತಾದ ಕೃತಿಗಳನ್ನು ವೈದ್ಯಕೀಯ ಲೋಕ, ಮತ್ತ ನಮ್ಮ ಸಂಸ್ಕೃತಿಯ ಪ್ರತಿಕವಾದ ಆಯುರ್ವೇದಕ್ಕೆ ಕಾಣಿಕೆಯಾಗಿ ಶ್ರೀಗಳು ನೀಡಿದ್ದಾರೆ. ಅಲ್ಲದೆ ಆಂಗ್ಲಭಾಷೆಯಲ್ಲಿ Treatment for poisionous snoke Bite ೧೯೮೧ರಲ್ಲಿ ವಿಷ ಚಿಕಿತ್ಸೆ–೨೦೦೦ ಹೀಗೆ ಇನ್ನೂ ವೃತ್ತಿ ಮತ್ತು ಪ್ರವೃತ್ತಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ದೇಹಿ ಎಂದು ಬಂದ ಭಕ್ತರಿಗೆ ಜ್ಞಾನ ಅನ್ನ ಅಕ್ಷರದ ಜೊತೆಗೆ ನಾಟಿ ವೈದ್ಯಕೀಯ ಚಿಕಿತ್ಸೆ ನೀಡುತ್ತ ಸಮಾಜಮುಖಿಯೂಗಿ ಶ್ರೀಗಳು ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತದ್ದಾರೆ. ಇವರನ್ನ ಕುರಿತು 'ನಾಗಮಂತ್ರಯೋಗಿ" ಕೃತಿ ಹೊರ ತಂದಿದ್ದಾರೆ."[೨೨] ಮೈಸೂರು ನಗರದ ಹೃದಯ ಭಾಗದಲ್ಲಿರುವ ಶ್ರೀ ನೀಲಕಂಠ ಸ್ವಾಮಿಗಳ ಮಠವು ಸಹ ಸಾಹಿತ್ರ ಪ್ರಸಾರದಲ್ಲಿ ತನ್ನ ಅಳಲು ಸೇವೆಯನ್ನು ಸಲ್ಲಿಸುತ್ತ ಬಂದಿದೆ. ಪ್ರಸ್ತುತ ಈಗಿನ ಗುರುಗಳಾದ ಶ್ರೀ.ಮ.ನಿ.ಪ್ರ.ಸ್ವ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಉತ್ತಮ ವಾಗ್ಮಿಗಳು ಶರಣ ಪ್ರವಚನಾ ಪಟುಗಳು ಆಗಿದ್ದು,ಧಾರ್ಮಿಕತೆ ಮತ್ತು ಸಾಂಸ್ಕೃತಿಕ ಸೇವೆಗಳ ಜೊತೆಗೆ ಸಾಹಿತ್ಯ ಸೇವೆಯಲ್ಲಿ ಮುಂದಿದ್ದಾರೆ. ಅಧಿಕಾರಕ್ಕೆ ಬಂದ ಮೇಲೆ ಮಠ ಚಿತ್ರಣವನ್ನು ಬದಲಾಯಿಸಿ ಸಮಾಜ ಮುಖಿಯಾಗಿ ಗುರುತಿಸುವಂತೆ ಮಾಡಿದ್ದಾರೆ. ಶ್ರೀಗಳು **ಕಲ್ಯಾಣದ ಕನ್ನಡಿ, ಬಸವ ಪೂಜಾ ವಿಧಾನ, ಜಂಗಮ ಮಹಿಮೆ ಮತ್ತು ಶೂನ್ಯ ಸಿಂಹಾಸನ** ಎಂಬ ಹಲವಾರು ಕಿರು ಹೊತ್ತಿಗೆಗಳು ರಚಿಸಿ ಮಠದ ವತಿಯಿಂದ ಪ್ರಕಟಿಸಿರುವುದನ್ನು ನಾವು ನೋಡಬಹುದು. ಇದಲ್ಲದೆ ಶ್ರೀಮಠದ ಕೂಗಳತೆಯಲ್ಲಿರುವ **ಜಪದಕಟ್ಟೆ ಮಠವು** ಸಹ ವಿಜಯನಗರ ಅರಸರ ಕಾಲದಿಂದಲೂ ಬೆಳೆದು ಬಂದಿದ್ದು ಈ ಮಠದ ಪೀಠಾಧ್ಯಕ್ಷರುಗಳು ಉತ್ತಮ ಜ್ಞಾನಗಳ ವಿದ್ವಾಂಸರು ಆಗಿದ್ದು, ಕನ್ನಡ ಮತ್ತು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದಿದ್ದಾರೆ. ೧೯೫ರಲ್ಲಿ ಶ್ರೀಗಳು ಮಠದ ಪಟ್ಟಾಧ್ಯಕ್ಷರಾದ ಶ್ರೀಗಳು ಸ್ನಾತಕೋತ್ತರ

---

೨೨. ಕರ್ನಾಟಕ ವೀರಶೈವ ಮಠಗಳು, ಚಂದ್ರಶೇಖರ ನಾರಣಪುರ, ಪು. ೧೦೪೮

ಪದವಿಯನ್ನು ಪಡೆದು ನಂತರ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಡಾ ಮುಮ್ಮಡಿ ಚಂದ್ರಶೇಖರಶಿವಾಚಾರ್ಯ ಸ್ವಾಮಿಗಳು ಉತ್ತಮ ವಿದ್ವಾಂಸರಾಗಿದ್ದು ಪ್ರವಚನ ಗೋಷ್ಠಿಗಳನ್ನು ಮಾಸಪೂರ್ತಿ ನಡೆಸುತ್ತಿದ್ದಾರೆ. ಅಲ್ಲದೆ **'ಅಮೃತಸಿಂಧು ವಚನಬಿಂದು"** ಮತ್ತು **'ಚಾಕ್ಷುಷೋಪನಿಷತ್"** ಎಂಬೆರಡು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಪ್ರಕಟಿಸಿ ಸಮರ್ಪಿಸಿದ್ದಾರೆ.

ಮೈಸೂರುನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅರಮನೆಪಂಚಗವಿಮಠವು ಮೈಸೂರುಸಂಸ್ಥಾನ ಮಠ ಎಂದು ಪ್ರಸಿದ್ಧವಾಗಿದ್ದು, ರಾಜಾಶ್ರಯದಲ್ಲಿ ಬೆಳೆದಂತಹ ಮಠ ಸುಮಾರು ೩೦ಕ್ಕೂ ಹೆಚ್ಚು ಗುರುಗಳು ಶ್ರೀಮಠದ ಪೀಠಾಧ್ಯಕ್ಷರಾಗಿದ್ದಾರೆ. "ಅವರಲ್ಲಿ ಪ್ರಮುಖವಾಗಿ ನಮಗೆ ಸಾಹಿತ್ಯಕ ದೃಷ್ಟಿಯಿಂದ ೭ನೇ ಪೀಠಾಧಿಪತಿಗಳಾದ ಶ್ರೀ ಮ.ನಿಪ್ರ. ಗೌರಿಶಂಕರ ಮಹಾಸ್ವಾಮಿಗಳು ಕ್ರಿ.ಶ. ೧೯೫೨ ರಲ್ಲಿ ಲಿಂಗೈಕ್ಯರಾದ ಶ್ರೀಗಳು ಕನ್ನಡ ಮತ್ತು ಸಂಸ್ಕೃತ ಭಾಷೆಯ ಜೊತೆಗೆ ಭಾರತೀಯ ತತ್ವಶಾಸ್ತ್ರದಲ್ಲಿ ಪಾಂಡಿತ್ಯ ಪಡೆದಿದ್ದರು. ಇನ್ನಿತರ ದೇಶಿಯ ಮತ್ತು ವಿದೇಶಿ ಭಾಷೆಗಳನ್ನು ಬಲ್ಲವರಾಗಿದ್ದರು. ೨೦ನೇ ಶತಮಾನದ ಶ್ರೇಷ್ಠ ಕವಿಗಳಲ್ಲಿ ಒಬ್ಬರು ಎಂದು ಪರಿಗಣಿಸಲ್ಪಟ್ಟಿದ್ದರು. ವಿದ್ವತ್ತು ಮತ್ತು ವೈರಾಗ್ಯಗಳು ಮೇಳೈಸಿಕೊಂಡಿದ್ದ ಅಪೂರ್ವ ವ್ಯಕ್ತಿತ್ವ ಉಳ್ಳವರಾಗಿದ್ದರು."[೨೩] ಶ್ರೀ ಗೌರಿಶಂಕರ ಶ್ರೀಗಳು ಕನ್ನಡದಲ್ಲಿ ಪ್ರಸ್ತುತ ಭಾಗಶಃ ಉಪಲಬ್ದವಿರುವ **'ಅಕ್ಕಮಹಾದೇವಿ ಚಂಪೂಕಾವ್ಯ'**ವನ್ನು ಬರೆದು ಸುಪ್ರಸಿದ್ದಾರಾಗಿದ್ದಾರೆ. ದುರದೃಷ್ಟದ ಸಂಗತಿ ಎಂದರೆ ಈ ಕೃತಿಯು ಅಸಮಗ್ರವಾಗಿ ಲಭ್ಯವಾಗಿದೆ. ಶ್ರೀಗಳು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ **'ಬಸವಾನಂದಲಹರಿ"** ಎಂಬ ಸ್ತೋತ್ರ ಕಾವ್ಯವನ್ನು ರಚಿಸಿದರು ಇದರಲ್ಲಿ ಶಾರ್ದೂಲ ವಿಕ್ರಿಡಿತ, ವಸಂತ ತಿಲಕಾ, ಸಗ್ಧರಾ ಮುಂತಾದ ಛಂದಸ್ಸುಗಳಲ್ಲಿ ಬಸವೇಶ್ವರರ ಬಗೆಗೆ ೧೦೮ ಪದ್ಯಗಳನ್ನು ರಚಿಸಿದ್ದಾರೆ. ಇಲ್ಲಿನ ಕೆಲವು ಪದ್ಯಗಳಲ್ಲಿ ಅರ್ಥಾಲಂಕಾರಗಳನ್ನೂ ಇನ್ನು ಕೆಲವು ಪದ್ಯಗಳಲ್ಲಿ ಶಬ್ದಾಲಂಕಾರಗಳನ್ನೂ ಯೋಜಿಸಿದ್ದಾರೆ. ಭಕ್ತಿರಸ ತುಂಬಿರುವ ಈ ಕೃತಿಯಿಂದ ಶ್ರೀಗಳ ಶಬ್ದ ಮತ್ತು ಭಾಷಾ ಪ್ರೌಢಿಮೆಯನ್ನು ತಿಳಿಯಬಹುದು. ಇದಲ್ಲದೆ ಶ್ರೀಗಳು **'ಭಗವದ್ಗೀತಾ ವೀರಶೈವ ಭಾಷ್ಯಂ"** ಎಂಬ ಕೃತಿ ರಚಿಸಿ ವೀರಶೈವ ಸಿದ್ಧಾಂತಕ್ಕನುಗುಣವಾಗಿ ವ್ಯಾಖ್ಯಾನ ಬರೆಯಲು ಪ್ರಾರಂಭಿಸಿದ್ದರು. ಆದರೆ ಅವರ ಅಕಾಲಿಕ ನಿಧನದಿಂದ ಆ ಕಾರ್ಯಅಲ್ಲಿಗೆ ನಿಂತುಹೋಯಿತು ಮುಂದೆ ಡಾ.ಟಿ.ಜಿ.ಸಿದ್ಧಪ್ಪಾರಾಧ್ಯರು ಕ್ರಿ.ಶ. ೧೯೯೧ ರಲ್ಲಿ ವೀರಶೈವ ಸಿದ್ಧಾಂತ ರಹಸ್ಯವು ಹೇಗೆ ಎಂಬುದನ್ನು ಸರಳ ಸಂಸ್ಕೃತ ಭಾಷೆಯಲ್ಲಿ ನಿರೂಪಿಸಿದ್ದಾರೆ.

---

೨೩. ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಸಾಹಿತ್ಯ ಲೇ:ವಿದ್ವಾನ್ ಇಮ್ಮಡಿ ಶಿವಬಸವ ಸ್ವಾಮಿಗಳು, ಪು. ೫೩

ಮೈಸೂರು ನಗರದಲ್ಲಿ ಎಲೆಮರೆಯ ಕಾಯಿಯಂತೆ ಅರಮನೆಗೆ ಅನತಿ ದೂರದಲ್ಲಿರುವ ವೀರಶೈವ ಮಠವೇ **ಕುಂದೂರುಮಠ** ಈ ಮಠಾಧಿಪತಿಗಳು ಅತ್ಯಂತ ಪ್ರಸಿದ್ದರು, ವಿದ್ವಾಂಸರು, ಸಾಹಿತಿಗಳು ಚಿಂತರು, ವಿಮರ್ಶಕರು ಆಗಿರುವ ವಿದ್ವಾನ್ ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು. ಶ್ರೀಗಳು ಮಠದ ಪೀಠಾಧಿಪತಿಗಳಾದ ಮೇಲೆ ಮಠದ ಚಿತ್ರಣವೇ ಬದಲಾಯಿತು. ಸಾಮಾಜಿಕವಾಗಿ ಧಾರ್ಮಿಕವಾಗಿ ಮತ್ತು ಶೈಕ್ಷಣಿಕ ಕ್ರಾಂತಿಗೆ ನಾಂದಿಯಾಯಿತು. ಇವರು ಉಪನ್ಯಾಸಕರಾಗಿ ಮತ್ತು ಧರ್ಮಗುರುಗಳಾಗಿ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಕನ್ನಡ-ಸಂಸ್ಕೃತ-ಆಂಗ್ಲಭಾಷೆಗಳಲ್ಲಿಸಂಪೂರ್ಣಹಿಡಿತಹೊಂದಿದ್ದರು.ಇವರು **'ಸಂಸ್ಕೃತಸಾಹಿತ್ಯಕ್ಕೆಕರ್ನಾಟಕದಕೊಡುಗೆ''** ಎಂಬ ಮಹಾಪ್ರಬಂಧವನ್ನು ಮಂಡಿಸಿ ಮೈಸೂರು ವಿಶ್ವ ವಿದ್ಯಾನಿಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಈ ಪ್ರಬಂಧವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲಿದ ಕೃತಿಯಾಗಿದೆ. ಇದಲ್ಲದೆ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳೆರಡಕ್ಕು ಅತ್ಯಮೂಲ್ಯ ಕೊಡುಗೆಯನ್ನು ನೀಡದ್ದಾರೆ. ಇದರ ಮಹಾನ್ ಕೃತಿ **'ಸರ್ವದರ್ಶನಸಂಗ್ರಹ''** ಸಂಸ್ಕೃತ ಸಾಹಿತ್ಯದಲ್ಲೆ ಪ್ರಸಿದ್ಧಿ ಪಡೆದಿದೆ. ''ಸಂಸ್ಕೃತ, ಸಾಹಿತ್ಯ, ದರ್ಶನ, ತರ್ಕ, ಮೀಮಾಂಸೆ, ಯೊಗಸೂತ್ರ ಇತ್ಯಾದಿಗಳಲ್ಲಿ ಪರಿಶ್ರಮ ಹೊಂದಿರುವ ಶ್ರೀ ಇಮ್ಮಡಿಶಿವಬಸವಸ್ವಾಮಿಗಳ **'ಅಲ್ಲಮಪ್ರಭುವಿನಟೀಕಿನ ವಚನಗಳು'** ಕೃತಿಯನ್ನೇ ಗಮನಿಸಬಹುದು. ಆರಂಭದಲ್ಲಿಯೇ ಅಲ್ಲಮ ಆಧ್ಯಾತ್ಮಿಕತೆಯ ಉತ್ತುಂಗ ಶಿಖರವನ್ನೇರಿದ ಧೀರ ಯೋಗಿಯ ನಿಲುವುಗಳು ಮಾತ್ರ ವಚನಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಸರಿಯಾಗಿಯೇ ಗುರುತಿಸುತ್ತಾರೆ. ತತ್ವಶಾಸ್ತ್ರ, ಯೋಗಸೂತ್ರ, ಯೋಗೋಪನಿಷತ್ತು, ತಂತ್ರ ಗ್ರಂಥಗಳಲ್ಲಿ ಬರುವ ವಿಚಾರಗಳಿಗೂ ಶರಣರ ವಿಚಾರಧಾರೆಗೂ ಕಂಡು ಬರುವ ಸಾಮ್ಯವನ್ನು ಗುರುತಿಸುತ್ತಾರೆ. ಕುಂಡಲಿನೀ ಮಾರ್ಗಕ್ಕೆ ಶಿವಯೋಗದ ತಾತ್ವಿಕ ನಿರೂಪಣೆ ನೀಡುತ್ತಾರೆ. ಆಧಾತ್ಮಿಕ ಜೀವನದ ಅನಿರ್ವಚನೀಯ ಅನುಭವಗಳು ಪ್ರತೀಕ, ಉಪಮೆಗಳ ಆಶ್ರಯದಲ್ಲಿ ಜಟಿಲ ಸ್ವರೂಪ ಬೆಡಗಿನ ವಚನಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸುತ್ತಾರೆ' ಬೆಡಗಿನ ವಚನಗಳ ಅಧ್ಯಯನದಲ್ಲಿ ಮಹಾಲಿಂಗದೇವರು, ಕಲ್ಲುಮಠದ ಪ್ರಭುದೇವರು, ಚನ್ನವೀರಾಚಾರ್ಯ ಮುಂತಾದವರ ಟೀಕು, ವ್ಯಾಖ್ಯಾನಗಳ ತುಲನಾತ್ಮಕ ಅಧ್ಯಯಕ್ಕೆ ಮಾರ್ಗದರ್ಶನ ಮಾಡುತ್ತಾರೆ ತಮ್ಮ ವಸ್ತು ವಿಷಯ ನಿರೂಪಣೆಗಳಲ್ಲಿ ವೈಶಿಷ್ಟ್ಯ ಎನಿಸಬಹುದಾದ ರೀತಿಯಲ್ಲಿ ಅಲ್ಲಮಪ್ರಭುವಿನ ಟೀಕಿನ ವಚನಗಳು ಕೃತಿಯು ಮೌಲ್ಯಯುತವಾಗಿದೆ. ಇದಲ್ಲದೆ **'ಶರಣತತ್ವಚಿಂತ ವಚನಲೋಕ''** ಮತ್ತು **'ಅಲ್ಲಮಪ್ರಭುದೇವರು'** ಮುಂತಾದ ಮೌಲ್ವಿಕ ಕೃತಿಗಳನ್ನು ರಚಿಸಿ ಸಂಸ್ಕೃತ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಇವರು **'ಕರಣಹಸಿಗೆ'**ಯಲ್ಲಿ ತಮ್ಮ ವಿದ್ವತ್ ಪಾಂಡಿತ್ಯವನ್ನು

ತೋರಿರುವುದು ಕಂಡುಬರುತ್ತದೆ."[೨೪] ವಚನ ಸಾಹಿತ್ಯದ ಬಗ್ಗೆ ಅಪಾರವಾದ ಅಧ್ಯಯನ ಮಾಡಿಕೊಂಡಿದ್ದು ವಿದ್ವತ್ ಪೂರ್ಣ ಲೇಖನಗಳನ್ನು ಪ್ರಕಟಿಸಿ ಅನೇಕ ವಿಚಾರಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಿದ್ದಾರೆ. ಇವರ ಕರಕಮಲಸಂಜಾತರಾದ ಶ್ರೀಶರತ್‌ಚಂದ್ರಮಹಾಸ್ವಾಮಿಗಳು ಸಹ ಸಂಸ್ಕೃತದಲ್ಲಿಎಂ.ಎಪದವಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ ಪದವಿಯನ್ನು ಪಡೆದು ಹಿರಿಯಗುರುಗಳಂತೆ, ಸಮಾಜೋಧಾರ್ಮಿಕ ಕ್ಷೇತ್ರದ ಜೊತೆಗೆ ಸಾಹಿತ್ಯ ಸೇವೆ ಮತ್ತು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಮಠಗಳಿಲ್ಲದೆ ಮೈಸೂರು ಜಿಲ್ಲೆಯ ವೀರಶೈವ ಮಠಗಳಲ್ಲಿ ಇನ್ನೂ ಅನೇಕ ಮಠಗಳು ಸಾಹಿತ್ಯ ಸೇವೆಯಲ್ಲಿ ತೊಡಗಿಸಿ ಕೊಂಡಿವೆ. ಕೆಲವು ಹಿರಿಯ ಗುರುಗಳ ಹಸ್ತ ಪ್ರತಿಗಳ ಲಭ್ಯವಿರುವುದಿಲ್ಲ. ಉದಾಹರಣೆಗೆ ತಿ.ನರಸೀಪುರ ತಾಲೂಕು ನೆರೆಗ್ಯಾತನಹಳ್ಳಿ ಶ್ರೀಮಠದ ಶ್ರೀ ಗುರುಬಸವಸ್ವಾಮಿಗಳು ವಿದ್ವಾಂಸರಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಇವರು ರಚಿಸಿರುವ ಹಸ್ತಪ್ರತಿಗಳು ಲಬ್ಯವಿಲ್ಲ ಎಂಬುದು ವಿಷಾದನೀಯ. ಇದೇ ತಾಲ್ಲೂಕಿನ ವಾಟಾಳು ಸೂರ್ಯಸಿಂಹಾಸನ ಮಠದಲ್ಲಿ ಓಲೆಗರಿಗಳ ಕಟ್ಟುಗಳು ದೊರೆಕಿದ್ದು ಅವು ಧಾರಾವಾಢದ ಸಂಶೋಧಕರಲ್ಲಿ ಉಳಿದಿವೆ ಎನ್ನಲಾಗಿದೆ ಇಷ್ಟಲ್ಲದೆ ಶಿಲಾ ಶಸನಗಳ ಮತ್ತು ತಾಮ್ರ ಶಾಸನಗಳು ಇವೆ ಎನ್ನಲಾಗುತ್ತಿದೆ. ಇದಲ್ಲದೆ ಚಿದರವಳ್ಳಿ ಗವಿಮಠದ ಮೂರನೇ ಗುರುಗಳಾದ ಶ್ರೀಶಿವಯೋಗಿಷಡಕ್ಷರಸ್ವಾಮಿ ಅಪಾರ ವಿದ್ಯತ್‌ಪಾಂಡಿತ್ಯವನ್ನು ಹೊಂದಿದ್ದು **'ಶ್ರೀಶಿವಯೋಗಿ ಶಿವಾನುಭವ ನಿಧಿ"** ಪೂರ್ವ ಭಾಗ ನಮಗೆ ದೊರೆತಿರುವ ಕೃತಿ – ೧೯೪೮ ರಲ್ಲಿ ಪ್ರಕಟಣೆಗೊಂಡಿದೆ. ಇದರ ಉತ್ತರಭಾಗ ನಮಗೆ ಲಭ್ಯವಿಲ್ಲ. ಈ ಶ್ರೀಗಳ ಇನ್ನು ಅನೇಕ ಗ್ರಂಥಗಳು ಕಾಲಗರ್ಭದಲ್ಲಿ ನಾಶವಾಗಿರಬಹುದು ಎನ್ನುತ್ತಾರೆ ಅಲ್ಲಿನ ಶ್ರೀಗಳಾದ ಶ್ರೀ.ಮ.ನಿ.ಪ್ರ. ಚನ್ನಸದಾಶಿವದೇಶಿಕೇಂದ್ರ ಸ್ವಾಮಿಗಳು. ಹೀಗೆ ಅನೇಕ ವೀರಶೈವ ಮಠಾಧೀಶರುಗಳು ಸಾಹಿತ್ಯ ರಚನೆಯ ಜೊತೆ ಸಾಹಿತ್ಯ ಪೋಷಕರಾಗಿ, ಪ್ರಕಾಶಕರಾಗಿ ಸೇವೆಸಲ್ಲಿಸಿ ಮೈಸೂರುಪ್ರಾಂತ್ಯದಲ್ಲಿ ವೀರಶೈವಸಾಹಿತ್ಯ ಬೆಳಿಯಲು ಕಾರಣಿ ಭೂತರಾಗಿದ್ದಾರೆ. ಇಂದಿನ ಮಠಾಧೀಪತಿಗಳು ಸಹ ತಮ್ಮ ಹಿರಿಯರ ಮಾರ್ಗವನ್ನೆ ಅನುಸರಿಸಿ ಆಧುನಿಕತೆಗೆ ತಕ್ಕಂತೆ ಜಾತಿಮತ ಧರ್ಮದ ಬಂಧನ'ಕ್ಕೆ ಒಳಗಾಗದೆ ಸಾಹಿತ್ಯಕ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತ ಜಿಲ್ಲೆಯ ಏಳಿಗೆಗೆ ಸದಾ ಜಾಗೃತವಾಗಿದ್ದು, ಧರ್ಮ ಪೋಷಣೆಯ ಜೊತೆಗೆ ಸಾಹಿತ್ಯ ಪೋಷಣೆಯನ್ನು ಮಾಡುತ್ತಿವೆ.

---------------

೨೪. ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಸಾಹಿತ್ಯ ಲೇಬಿ.ನಂ. ಚಂದ್ರಯ್ಯ ಪು. ೧೧೭